www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–10 ಸಂಚಿಕೆ–04 ಮೇ 2016
Volume : X Issue : 04 May 2016

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಸ್ಥಳೀಯ ಮತ್ತು ವಿದೇಶ ಸುದ್ಧಿ
3. ಬಿಡುಗಡೆಯ ಕುಟುಂಬ
4 ಪ್ರಾರ್ಥನಾ ಮನವಿಗಳು
5. ಆರೋಗ್ಯ ಸ್ವರ
6. ಶ್ರೀ ಪೌಲನ ಸೆರೆಮನೆಯ ಪತ್ರಿಕೆಗಳು
7. ನೀತಿವಂತನ ಆಶೀರ್ವಾದಗಳು
8. ಮಹಿಳೆಯರ ಸ್ವರ 'ರೂತಳು'
9. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧವಾದ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ನನ್ನ ಆತ್ಮೀಯ ವಂದನೆಗಳು. ಪ್ರಿಯರೇ, ಕರ್ತನಾದ ಯೇಸುಕ್ರಿಸ್ತನು ಅದ್ಭುತವಾದ ರೀತಿಯಲ್ಲಿ ನಮ್ಮೆಲ್ಲರನ್ನು ನಡೆಸುತ್ತಾ ಇದ್ದಾನೆ ಅದಕ್ಕಾಗಿ ನಾನು ಆತನಿಗೆ ವಂದನೆ ಹೇಳುತ್ತೇನೆ. ಆತನು ಇವತ್ತಿನವರೆಗೂ ಈ ದೇವರ ಸ್ವರ ಮಾಸ ಪತ್ರಿಕೆಯನ್ನು ಆಶೀರ್ವದಕರವಾಗಿ ನಡೆಸುತ್ತಾ ಬಂದಿದ್ದಾನೆ ಕೀರ್ತ. 103:1-2 ನನ್ನ ಮನವೇ, ಯೆಹೋವನನ್ನು ಕೊಂಡಾಡು; ನನ್ನ ಸರ್ವೇಂದ್ರಿಯಗಳೇ, ಆತನ ಪವಿತ್ರ ನಾಮವನ್ನು ಕೀರ್ತಿಸಿರಿ. ನನ್ನ ಮನವೇ, ಯೆಹೋವನನ್ನು ಕೊಂಡಾಡು; ಆತನ ಉಪಕಾರಗಳಲ್ಲಿ ಒಂದನ್ನೂ ಮರೆಯದಿರಿ ಎಂಬುದಾಗಿ ಆತನ ವಾಕ್ಯದಲ್ಲಿ ಓದುತ್ತೇವೆ ಪ್ರಿಯರೇ. ಹೌದು ಪ್ರಿಯರೇ, ಈ ಒಂದು ಮಾಸ ಪತ್ರಿಕೆಯು ಒಬ್ಬ ಸುವಾರ್ತಿಕನಿಗೆ ಸಮಾನವಾಗಿದೆ ಅಥವಾ ಅಧಿಕವಾದಂತಹ ಸುವಾರ್ತಿಕರು ಎಂದು ಹೇಳುವುದರಲ್ಲಿ ತಪ್ಪೇನು ಇಲ್ಲ. ಕಾರಣವೇನೆಂದರೆ ಇದು ಸುವಾರ್ತೆ ತಲುಪದ ಸ್ಥಳಗಳಲ್ಲಿ ಸುವಾರ್ತೆ ಸಂದೇಶವನ್ನು ತೆಗೆದುಕೊಂಡು ಹೋಗುವಂತದ್ದಾಗಿರುತ್ತದೆ. ಅದಕ್ಕಾಗಿ ಈ ಮಾಸಿಕ ಪತ್ರಿಕೆಗಾಗಿ ಪ್ರತಿ ತಿಂಗಳು ನೀವು ಪ್ರಾರ್ಥನೆ ಮಾಡುತ್ತಾ ಬಂದ ಹಾಗೆಯೇ ಸತತವಾಗಿ ಈ ಮಾಸಿಕ ಪತ್ರಿಕೆಗಾಗಿ ಪ್ರಾರ್ಥಿಸಬೇಕಾಗಿ ತಮ್ಮಲ್ಲಿ ನಾವು ಕಳಕಳಿಯಿಂದ ವಿನಂತಿಸುತ್ತೇವೆ. ಮಾತ್ರವಲ್ಲದೇ ತಮ್ಮೆಲ್ಲರ ಪ್ರೋತ್ಸಾಹದಿಂದಾಗಿ ನಾವು ಇಲ್ಲಿಯವರೆಗೆ ಒಂದು ಆಶೀರ್ವಾದಕರವಾದ ರೀತಿಯಲ್ಲಿ ಈ ಪತ್ರಿಕೆಯನ್ನು ಮುನ್ನಡೆಸಿಕೊಂಡು ಬರುವಂತೆ ಕರ್ತನಾದ ಯೇಸುಕ್ರಿಸ್ತನು ನಮಗೆ ಸಹಾಯ ಮಾಡಿದಕ್ಕಾಗಿ ವಂದನೆಯನ್ನು ಸಲ್ಲಿಸುತ್ತೇನೆ. ಯಾವುದೇ ವಿಧವಾದಂತಹ ಒಂದು ಸೇವೆಯಾಗಿರಬಹುದು ಅದು ಸಫಲತೆ ಹೊಂದಬೇಕಾದರೆ ಅದರಲ್ಲಿ ದೇವರ ಕೃಪೆ ನಮಗೆ ಅತ್ಯವಶ್ಯಕವಾದದ್ದು ಹಾಗಾದರೆ ಈ ದೇವರ ಸ್ವರ ಮಾಸ ಪತ್ರಿಕೆಯು ಆಶೀರ್ವಾದಕರವಾಗಿರುವುದಕ್ಕೆ ಅನೇಕ ಕಾರಣಗಳಿವೆ

1) ದೇವರ ವಾಗ್ದಾನ :- ದೇವರ ವಾಕ್ಯದಲ್ಲಿ ಓದುತ್ತೇವೆ, ಅರಣ್ಯ. 23:19 ಆತನು ಎರಡು ಮಾತಿನ ದೇವರಲ್ಲ, ಆತನು ಏನು ಹೇಳುತ್ತಾನೋ ಅದನ್ನು ನೆರವೇರಿಸುತ್ತಾನೆಂದು ಈ ವಾಕ್ಯದಲ್ಲಿ ನಾವು ನೋಡುತ್ತೇವೆ.

2) ದೇವರ ಕೃಪೆ ಕೀರ್ತ. 33:18ರಲ್ಲಿ ಆತನ ಕೃಪೆಯನ್ನು ನಿರೀಕ್ಷಿಸುತ್ತೇನೆಂದು ಭಕ್ತನಾದ ದಾವೀದನು ಹೇಳುತ್ತಾನೆ. ಆದಕಾರಣ ದೇವರ ಕೃಪೆಯಿಲ್ಲದೇ ಹೋಗುತ್ತಿದ್ದರೆ ನಾವು ಏನು ಮಾಡಲಿಕ್ಕೆ ಸಾಧ್ಯವಿಲ್ಲ ಯೋಹಾ. 15:5 ವಾಕ್ಯದಲ್ಲಿ ಯೇಸು ಹೇಳುತ್ತಾನೆ, ನನ್ನನ್ನು ಬಿಟ್ಟು ನೀವು ಏನನ್ನು ಮಾಡಲಾರಿರಿ ಎಂಬುದಾಗಿ ಹೌದು ಪ್ರಿಯರೇ, ದೇವರ ಕೃಪೆಗಾಗಿ ನಾವು ಸ್ತೋತ್ರವನ್ನು ಸಲ್ಲಿಸೋಣ.

3) ದೇವರ ಜನರ ಸತತವಾದ ಪ್ರಾರ್ಥನೆ :- ಪ್ರಾರ್ಥನೆಯಿಲ್ಲದೆ ನಾವು ಯಾವುದೇ ಸೇವೆಯಲ್ಲಿ ಸಫಲತೆ ಹೊಂದಿಕೊಳ್ಳುವುದಕ್ಕೆ ಖಂಡಿತವಾಗಿ ಸಾಧ್ಯವಾಗುವುದಿಲ್ಲ ಪ್ರಿಯರೇ. ಪ್ರಾರ್ಥನೆಯು ಅದು ಹೆಚ್ಚಿನ ಬಲವುಳ್ಳದಾಗಿದೆ. ಯಾಕೋ. 5:-16-18ರಲ್ಲಿ ನೀತಿವಂತನ ಅತ್ಯಾಸಕ್ತಿಯುಳ್ಳ ಪ್ರಾರ್ಥನೆಯು ಬಹು ಬಲವುಳ್ಳದು. ಈ ಮಾಸ ಪತ್ರಿಕೆಯ ಸೇವೆಗಾಗಿ ಸತತವಾಗಿ ಪ್ರಾರ್ಥನೆ ಮಾಡುತ್ತಾ ಬಂದಿರುವುದಕ್ಕಾಗಿ ನಿಮಗೆ ವಂದನೆ ಹೇಳುತ್ತೇನೆ ಇನ್ನು ಮುಂದೆಯು ಸತತವಾಗಿ ಪ್ರಾರ್ಥಿಸಿರಿ. ಈ ಮಾಸ ಪತ್ರಿಕೆಯ ಮೂಲಕವಾಗಿ ಸಾವಿರಾರು ಆತ್ಮಗಳು ದೇವರ ರಾಜ್ಯದೊಳಗೆ ಪ್ರವೇಶಮಾಡಬೇಕು, ಸೇರಬೇಕು.

4) ಸತತವಾದ ಪರಿಶ್ರಮ :- ಯಾವುದೇ ಒಂದು ಸೇವೆಯಲ್ಲಿ ನಾವು ಪರಿಶ್ರಮ ಮಾಡದೇ ಹೋದರೆ ನಾವು ನಮ್ಮ ಪ್ರಯತ್ನವನ್ನು ಹಾಕದೇ ಹೋದರೆ, ಖಂಡಿತವಾಗಿ ಅದರ ಸಫಲತೆ ಕಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಜ್ಞಾನೋ. 6:6-11 ವಾಕ್ಯದಲ್ಲಿ ಭಕ್ತನಾದ ಸೊಲೊಮೋನನು ಇರುವೆಯನ್ನು ತೋರಿಸಿ ಹೇಳುತ್ತಾ ಇದ್ದಾನೆ ಒಬ್ಬ ಅಲಸ್ಯಗಾರನಾಗಿರುವಂತಹ ವ್ಯಕ್ತಿಗೆ ಆತನು ಒಂದು ಇರುವೆಯ ಮೂಲಕವಾಗಿ ಪಾಠ ಕಲಿಸುವುದನ್ನು ನೋಡುತ್ತೇವೆ. ಕರ್ತನಾದ ಯೇಸುಕ್ರಿಸ್ತನು ಕೂಡ ತನ್ನ ಸೇವೆಯಲ್ಲಿ ಕೆಲಸ ಮಾಡುವಂಥವರನ್ನು ಕರೆದನು. ಮತ್ತಾ. 4:18-22ರಲ್ಲಿ ಅದನ್ನು ಓದುತ್ತೇವೆ ಆದಕಾರಣ ಯಾವುದೇ ಸೇವೆಯಲ್ಲಿ ಸಫಲತೆ ಕಾಣಬೇಕಾದರೆ ಸತತವಾದ ಪರಿಶ್ರಮ ಕೂಡ ಬೇಕಾಗಿರುತ್ತದೆ.

5) ಪ್ರತಿಯೊಬ್ಬರ ಪ್ರೋತ್ಸಾಹ : ಇಲ್ಲಿಯವರೆಗೆ ತಮ್ಮೆಲ್ಲರ ಪ್ರೋತ್ಸಾಹ ನಮಗೆ ಸಿಕ್ಕಿದೆ. ಅನೇಕರು ಪ್ರೋತ್ಸಾಹ ಮಾಡುತ್ತಿದ್ದಾರೆ, ಅನೇಕರು ಪತ್ರ ಬರೆಯುತ್ತಿದ್ದಾರೆ, ಫೋನ್ ಕರೆಗಳ ಮೂಲಕವಾಗಿ ನಮ್ಮನ್ನು ಪ್ರೋತ್ಸಾಹಿಸುತ್ತಾ ಇದ್ದಾರೆ. ಇದು ದೇವರ ರಾಜ್ಯದಲ್ಲಿ ಇನ್ನು ಹೆಚ್ಚಾಗಿ ದುಡಿಯುವುದಗೋಸ್ಕರ ನಮ್ಮನ್ನು ಸಂತೋಷ ಪಡಿಸುತ್ತದೆ. ಇಲ್ಲಿಯವರೆಗೆ ತಾವೆಲ್ಲರೂ ನಮ್ಮನ್ನು ಪ್ರೋತ್ಸಾಹಿಸಿದಂತೆ ಪ್ರಿಯರೇ ಇನ್ನು ಮುಂದೆಯೂ ತಾವು ನಮಗೋಸ್ಕರವಾಗಿ ಪ್ರೋತ್ಸಾಹ ಪಡಿಸಬೇಕಾಗಿ ನಾವು ಕೇಳಿಕೊಳ್ಳುತ್ತೇವೆ.

6) ಈ ಒಂದು ಸೇವೆಯನ್ನು ಕೈಯಲ್ಲಿ ಎತ್ತಿ ಹಿಡಿಯುವಂತದ್ದು :- ಉದಾ: ನೀವು ಅನೇಕರ ವಿಳಾಸವನ್ನು ನಮಗೆ ಕಳುಹಿಸಬಹುದು ಅಥವಾ ಅವರ ವಿಳಾಸವನ್ನು ನಮಗೆ ಕೊಟ್ಟು ಅವರ ಚಂದಾವನ್ನು ನೀವೇ ಭರಿಸಬಹುದು. ಆಗ ಅವರು ರಕ್ಷಣೆ ಹೊಂದುವಾಗ, ಆತ್ಮೀಕ ಆಶೀರ್ವಾದಗಳನ್ನು ಹೊಂದಿಕೊಳ್ಳುವಾಗ ಆ ಒಂದು ಆಶೀರ್ವಾದ ನಿಮ್ಮದಾಗಿರುತ್ತದೆ. ಈ ಸೇವೆಯನ್ನು ಹಣದ ಸಹಾಯ ಮಾಡುವುದರಿಂದಲೂ ಅಥವಾ ಯಾವುದೇ ವಿಳಾಸವನ್ನು ಕೊಡುವುದರ ಮೂಲಕವೂ, ಅವರ ಚಂದಾವನ್ನು ಭರಿಸುವದರ ಮೂಲಕವೂ ನೀವು ಈ ಒಂದು ಸೇವೆಯನ್ನು ಎತ್ತಿ ಹಿಡಿಯಬಹುದು.

7) ನೀವು ನಿಮ್ಮ ಚಂದಾ ಹಣವನ್ನು ಪತ್ರಿ ತಿಂಗಳು ತಪ್ಪದೇ ಭರಿಸುವುದರ ಮೂಲಕವಾಗಿ : ಏಳು ಕಾರ್ಯಗಳು ಈ ಒಂದು ಮಾಸಿಕ ಪತ್ರಿಕೆ ಸಫಲತೆ ಮಾರ್ಗದಲ್ಲಿ ಹೋಗುವುದಕ್ಕೆ ಸಾಧ್ಯ. ಆದಕಾರಣ ಇಲ್ಲಿಯವರೆಗೆ ಸಾವಿರಾರು ಆತ್ಮಗಳು ಈ ಮಾಸ ಪತ್ರಿಕೆ ಸೇವೆಯ ಮೂಲಕ ರಕ್ಷಣೆ ಹೊಂದಿಕೊಂಡಿರುತ್ತಾರೆ. ಮಾತ್ರವಲ್ಲ ಅನೇಕರು ಆತ್ಮೀಕವಾಗಿ ಬೆಳವಣಿಗೆ ಹೊಂದಿಕೊಂಡಿದ್ದಾರೆ, ಅನೇಕರು ಉತ್ತೇಜನ ಹೊಂದಿಕೊಂಡಿದ್ದಾರೆ, ಅನೇಕರು ಆಶೀರ್ವಾದಿಸಲ್ಪಟ್ಟಿದ್ದಾರೆ. ಆದಕಾರಣ ನೀವೆಲ್ಲರೂ ಈ ಒಂದು ಮಾಸ ಪತ್ರಿಕೆ ಮೂಲಕ ಆಶೀರ್ವಾದ ಹೊಂದಿರುವುದನ್ನು ಕೇಳಿ ನಮಗೆ ಖಂಡಿತವಾಗಿ ಸಂತೋಷವಾಗುತ್ತದೆ. ಇನ್ನು ಕರ್ತನು ಈ ಮಾಸ ಪತ್ರಿಕೆಯ ಮೂಲಕವಾಗಿ ತಮ್ಮನ್ನು, ತಮ್ಮ ಕುಟುಂಬಗಳನ್ನು ಆಶೀರ್ವದಿಸಲಿ ಎಂಬುದಾಗಿ ನಾವು ಪ್ರಾರ್ಥಿಸುತ್ತೇವೆ. ಈವತ್ತು ನಾವು ಮೇ ತಿಂಗಳಿಗೆ ಬಂದಿದ್ದೇವೆ. 2016ನೇ ವರ್ಷದ ನಾಲ್ಕು ತಿಂಗಳನ್ನು ಕಳೆದು, ಐದನೇ ತಿಂಗಳಿಗೆ ಬಂದಿದ್ದೇವೆ. ಆದಕಾರಣ ನಾವು ನಮ್ಮನ್ನೇ ಪೂರ್ಣವಾಗಿ ದೇವರ ಸೇವೆಗಾಗಿ ಅರ್ಪಣೆ ಮಾಡಿಕೊಡೋಣ. ದೇವರ ಸೇವೆ ಬೆಳೆಯುವುದಕ್ಕಾಗಿ ಪ್ರಪಂಚದಾದ್ಯಂತ ಆತ್ಮಗಳು ದೇವರ ರಾಜ್ಯಕ್ಕೆ ಪ್ರವೇಶಿಸುವುದಕ್ಕಾಗಿ ನಾವು ಸತತವಾಗಿ ಪ್ರಾರ್ಥಿಸೋಣ ಪ್ರಿಯರೇ.

ದೇವರು ನಿಮ್ಮೆಲ್ಲರನ್ನು ಆಶೀರ್ವದಿಸಲಿ, ಆಮೆನ್.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

ಇಸ್ರಾಯೇಲ್ಯರು ತಮ್ಮ ಸೃಷ್ಟಿಕರ್ತನಲ್ಲಿ ಹೆಚ್ಚಳಪಡಲಿ;
ಚೀಯೋನಿನವರು ತಮ್ಮ ರಾಜನಲ್ಲಿ ಹರ್ಷಿಸಲಿ (ಕೀರ್ತ. 149:2).

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

20) "ಪ್ರಿಯರೇ, ನೀವು ಪರಿಶೋಧನೆಗಾಗಿ ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ ಆಶ್ಚರ್ಯಪಡಬೇಡಿರಿ; ವಿಪರೀತವಾದ ಸಂಗತಿ ಸಂಭವಿಸಿತೆಂದು ಯೋಚಿಸಬೇಡಿರಿ. ಆದರೆ ನೀವು ಎಷ್ಟರ ಮಟ್ಟಿಗೂ ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗಿದ್ದೀರೋ ಅಷ್ಟರ ಮಟ್ಟಿಗೆ ಸಂತೋಷವುಳ್ಳವರಾಗಿರ್ರಿ; ಆತನ ಮಹಿಮೆಯ ಪ್ರತ್ಯಕ್ಷತೆಯಲ್ಲಿಯೂ ನೀವು ಸಂತೋಷಪಟ್ಟು ಉಲ್ಲಾಸಗೊಳ್ಳುವಿರಿ. ನೀವು ಕ್ರಿಸ್ತನ ಹೆಸರಿನ ನಿಮಿತ್ತ ನಿಂದೆಗೆ ಗುರಿಯಾದರೆ ಧನ್ಯರೇ; ತೇಜೋಮಯವಾದ ಆತ್ಮನಾಗಿರುವ ದೇವರಾತ್ಮನು ನಿಮ್ಮಲ್ಲಿ ನೆಲೆಗೊಂಡಿದ್ದಾನಲ್ಲಾ. ನಿಮ್ಮಲ್ಲಿ ಯಾವನಾದರೂ ಕೊಲೆಗಾರನು ಕಳ್ಳನು ದುಷ್ಟನು ಪರಕಾರ್ಯಗಳಲ್ಲಿ ತಲೆಹಾಕುವವನು ಆಗಿದ್ದು ಶಿಕ್ಷಾಪಾತ್ರನಾಗಬಾರದು. ಆದರೆ ಕ್ರೈಸ್ತನಾಗಿ ಬಾಧೆಪಟ್ಟರೆ ಅವನು ನಾಚಿಕೆಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ" (1 ಪೇತ್ರ. 4:12–16).

21) "ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟದ್ದರಿಂದ ನೀವು ಸಹ ಆತನಿಗಿದ್ದ ಭಾವವನ್ನೇ ಹಿಡಿದುಕೊಳ್ಳಿರಿ. ಯಾಕಂದರೆ ಶರೀರದಲ್ಲಿ ಬಾಧೆಪಟ್ಟವನು ಪಾಪದ ವಶದಿಂದ ತಪ್ಪಿಸಿಕೊಂಡವನಾಗಿ ಉಳಿದಿರುವ ತನ್ನ ಜೀವಮಾನಕಾಲದಲ್ಲಿ ಇನ್ನೂ ಮನುಷ್ಯರ ಅಭಿಲಾಷೆಗಳ ಪ್ರಕಾರ ಬದುಕದೆ ದೇವರ ಚಿತ್ತದ ಪ್ರಕಾರ ಬದುಕುವದಕ್ಕೆ ಪ್ರಯತ್ನ ಮಾಡುವನು" (1 ಪೇತ್ರ.4:1–2).

22) "ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದ ಜ್ಞಾನ ಹೊಂದಿ ಲೋಕದ ಮಲಿನತ್ವಗಳಿಗೆ ತಪ್ಪಿಸಿಕೊಂಡವರು ತಿರುಗಿ ಅವುಗಳಲ್ಲಿ ಸಿಕ್ಕಿಕೊಂಡು ಸೋತುಹೋದರೆ ಅವರ ಅಂತ್ಯಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗಿದೆ. ಅವರು ನೀತಿ ಮಾರ್ಗವನ್ನು ತಿಳಿದು ತಮಗೆ ಕೊಡಲ್ಪಟ್ಟ ಪರಿಶುದ್ಧ ಆಜ್ಞೆಯಿಂದ ತೊಲಗಿಹೋಗುವದಕ್ಕಿಂತ ಆ ಮಾರ್ಗವನ್ನು ತಿಳಿಯದಿದ್ದರೆ ಮೇಲಾಗಿತ್ತು. ನಾಯಿ ತಾನು ಕಕ್ಕಿದ್ದನ್ನು ನೆಕ್ಕುವದಕ್ಕೆ ತಿರುಗಿಕೊಂಡಿತು ಮತ್ತು ತೊಳೆದ ಹಂದಿ ಕೆಸರಿನಲ್ಲಿ ಹೊರಳುವದಕ್ಕೆ ಹೋಯಿತು ಎಂಬ ನಿಜವಾದ ಗಾದೆಗೆ ಸರಿಯಾಗಿ ನಡೆದಿದ್ದಾರೆ". (2 ಪೇತ್ರ. 2:20–22).

23) "ಪ್ರಿಯರೇ, ನಿಮಗೀಗ ಬರೆಯುವದು ಎರಡನೆಯ ಪತ್ರಿಕೆ. ಪರಿಶುದ್ಧ ಪ್ರವಾದಿಗಳು ಪೂರ್ವದಲ್ಲಿ ಹೇಳಿದ ಮಾತುಗಳನ್ನೂ ಕರ್ತನಾದ ರಕ್ಷಕನು ನಿಮ್ಮ ಅಪೊಸ್ತಲರ ಮೂಲಕ ಕೊಟ್ಟ ಅಪ್ಪಣೆಯನ್ನೂ ನೀವು ಜ್ಞಾಪಕಮಾಡಿಕೊಳ್ಳಬೇಕೆಂದು ಈ ಎರಡು ಪತ್ರಿಕೆಗಳಲ್ಲಿಯೂ ಜ್ಞಾಪಕಕೊಟ್ಟು ನಿಮ್ಮ ಸರಳ ಮನಸ್ಸನ್ನು ಪ್ರೇರಿಸಿದ್ದೇನೆ. ಕಡೇ ದಿವಸಗಳಲ್ಲಿ ತಮ್ಮ ದುರಾಶೆಗಳ ಪ್ರಕಾರ ನಡೆಯುವ ಕುಚೋದ್ಯಗಾರರು ಬಂದು ಕುಚೋದ್ಯ ಮಾಡುತ್ತಾ ಆತನ ಪ್ರತ್ಯಕ್ಷತೆಯ ವಿಷಯವಾದ ವಾಗ್ದಾನವು ಏನಾಯಿತು? ನಮ್ಮ ಪಿತೃಗಳು ನಿದ್ರೆ ಹೊಂದಿದ ದಿನ ಮೊದಲುಗೊಂಡು ಸಮಸ್ತವೂ ಲೋಕಾದಿಯಿಂದಿದ್ದ ಹಾಗೆಯೇ ಇರುತ್ತದಲ್ಲಾ ಎಂದು ಹೇಳುವರೆಂಬದಾಗಿ ನೀವು ಮೊದಲು ತಿಳುಕೊಳ್ಳಬೇಕು. ಹೀಗೆ ಮಾತನಾಡುವವರು ಒಂದು ಸಂಗತಿಯನ್ನು ತಿಳಿದಿರಬೇಕೆಂದು ಮರೆತು ಬಿಡುತ್ತಾರೆ; ಅದೇನಂದರೆ ಪೂರ್ವಕಾಲದಲ್ಲಿದ್ದ ಭೂಮ್ಯಾಕಾಶಗಳು ದೇವರ ವಾಕ್ಯದ ಮೂಲಕ ನೀರಿನಿಂದ ಉಂಟಾಗಿ ನೀರಿನಿಂದ ಆಧಾರಗೊಂಡಿರುವಲ್ಲಿ ಆ ನೀರುಗಳಿಂದಲೇ ಆ ಕಾಲದಲ್ಲಿದ್ದ ಲೋಕವು ಜಲಪ್ರಲಯದಲ್ಲಿ ನಾಶವಾಯಿತು. ಆದರೆ ಈಗಿರುವ ಭೂಮ್ಯಾಕಾಶಗಳು ಅದೇ ವಾಕ್ಯದ ಬಲದಿಂದ ಬೆಂಕಿಯ ಮೂಲಕ ನಾಶವಾಗುವದಕ್ಕೆ ಇಡಲ್ಪಟ್ಟಿವೆ; ಮತ್ತು ಭಕ್ತಿಹೀನರ ಶಿಕ್ಷಾವಿಧಿಯೂ ನಾಶವೂ ಉಂಟಾಗುವ ದಿನಕ್ಕಾಗಿ ಆ ಬೆಂಕಿ ಸಿದ್ಧವಾಗಿದೆ.

ಪ್ರಿಯರೇ, ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರುಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅವೆ ಎಂಬದನ್ನು ಮಾತ್ರ ಮರೆಯಬೇಡಿರಿ. ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂಬದಾಗಿ ಕೆಲವರು ಅರ್ಥ ಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ. ಆದರೂ ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು. ಇವೆಲ್ಲವುಗಳು ಹೀಗೆ ಲಯವಾಗಿ ಹೋಗುವದರಿಂದ ನೀವು ದೇವರ ದಿನದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಹಾರೈಸುತ್ತಾ ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲಾ;

ಯೆಹೋವನು ತನ್ನ ಪ್ರಜೆಗೆ ಪ್ರಸನ್ನನಾದನು; ದೀನರನ್ನು ರಕ್ಷಣೆಯಿಂದ ಭೂಷಿಸುತ್ತಾನೆ (ಕೀರ್ತ. 149:4).

ಆ ದಿನದಲ್ಲಿ ಆಕಾಶಮಂಡಲವು ಬೆಂಕಿ ಹತ್ತಿ ಲಯವಾಗಿ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಕರಗಿ ಹೋಗುವವು. ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನ ಆಕಾಶ ಮಂಡಲವನ್ನೂ ನೂತನ ಭೂಮಂಡಲವನ್ನೂ ಎದುರು ನೋಡುತ್ತಾ ಇದ್ದೇವೆ; ಅವುಗಳಲ್ಲಿ ನೀತಿಯು ವಾಸವಾಗಿರುವದು.

ಆದಕಾರಣ ಪ್ರಿಯರೇ, ನೀವು ಇವುಗಳನ್ನು ಎದುರುನೋಡುವವರಾಗಿರುವದರಿಂದ ಶಾಂತರಾಗಿದ್ದು ಆತನೆದುರಿನಲ್ಲಿ ನಿರ್ಮಲರಾಗಿಯೂ ನಿರ್ದೋಷಿಗಳಾಗಿಯೂ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡಿರಿ. ನಮ್ಮ ಕರ್ತನ ದೀರ್ಘಶಾಂತಿಯು ನಮ್ಮ ರಕ್ಷಣಾರ್ಥವಾಗಿ ಅದೆ ಎಂದು ಎಣಿಸಿಕೊಳ್ಳಿರಿ. ಇದೇ ಅಭಿಪ್ರಾಯಕ್ಕೆ ಸರಿಯಾಗಿ ನಮ್ಮ ಪ್ರಿಯ ಸಹೋದರನಾದ ಪೌಲನು ಸಹ ತನಗೆ ಅನುಗ್ರಹಿಸಿರುವ ಜ್ಞಾನದ ಪ್ರಕಾರ ನಿಮಗೆ ಬರೆದನು" (2 ಪೇತ್ರ. 3:1–15).

24) "ಪ್ರಿಯರಾದ ಮಕ್ಕಳೇ, ಕ್ರಿಸ್ತನ ಹೆಸರಿನ ನಿಮಿತ್ತ ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುವದರಿಂದ ನಿಮಗೆ ಬರೆಯುತ್ತೇನೆ. ತಂದೆಗಳೇ, ಆದಿಯಿಂದರುವಾತನನ್ನು ನೀವು ಬಲ್ಲವರಾಗಿರುವದರಿಂದ ನಿಮಗೆ ಬರೆಯುತ್ತೇನೆ. ಯೌವನಸ್ಥರೇ, ನೀವು ಕೆಡುಕನನ್ನು ಜಯಿಸಿರುವುದರಿಂದ ನಿಮಗೆ ಬರೆಯುತ್ತೇನೆ. ಮಕ್ಕಳಿರಾ, ನೀವು ತಂದೆಯನ್ನು ಬಲ್ಲವರಾಗಿರುವದರಿಂದ ನಿಮಗೆ ಬರೆದಿದ್ದೇನೆ. ತಂದೆಗಳೇ, ಆದಿಯಿಂದಿರುವಾತನನ್ನು ನೀವು ಬಲ್ಲವರಾಗಿರುವದರಿಂದ ನಿಮಗೆ ಬರೆದಿದ್ದೇನೆ. ಯೌವನಸ್ಥರೇ, ನೀವು ಶಕ್ತರಾಗಿರುವದರಿಂದಲೂ ದೇವರ ವಾಕ್ಯವು ನಿಮ್ಮಲ್ಲಿ ನೆಲೆಗೊಂಡಿರುವದರಿಂದಲೂ ನೀವು ಕೆಡುಕನನ್ನು ಜಯಿಸಿರುವದರಿಂದಲೂ ನಿಮಗೆ ಬರೆದಿದ್ದೇನೆ" (1 ಯೋಹಾ. 2:12–14).

25) "ಲೋಕವನ್ನಾಗಲಿ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ. ಲೋಕದಲ್ಲಿರುವ ಶರೀರದಾಶೆ ಕಣ್ಣಿನಾಶೆ ಬದುಕುಬಾಳಿನ ಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ. ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತವೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು" (1 ಯೋಹಾ. 2:15–17).

26) "ನಿಮ್ಮನ್ನು ಸನ್ಮಾರ್ಗದಿಂದ ತಪ್ಪಿಸಬೇಕೆಂದಿರುವವರ ವಿಷಯವಾಗಿ ಈ ಸಂಗತಿಗಳನ್ನು ನಿಮಗೆ ಬರೆದಿದ್ದೇನೆ" (1 ಯೋಹಾ. 2:26).

27) "ಪ್ರಿಯರಾದ ಮಕ್ಕಳೇ, ಆತನು ಪ್ರತ್ಯಕ್ಷನಾಗುವಾಗ ನಾವು ಆತನ ಆಗಮನದಲ್ಲಿ ಆತನ ಮುಂದೆ ನಿಲ್ಲಲು ನಾಚಿಕೆಪಡದೆ ಧೈರ್ಯದಿಂದಿರುವಂತೆ ಆತನಲ್ಲಿ ನೆಲೆಗೊಂಡಿರೋಣ. ಆತನು ನೀತಿವಂತನಾಗಿದ್ದಾನೆಂಬುದು ನಿಮಗೆ ಗೊತ್ತಾಗಿದ್ದರೆ ನೀತಿಯನ್ನು ಅನುಸರಿಸುವ ಪ್ರತಿಯೊಬ್ಬನು ಆತನಿಂದ ಹುಟ್ಟಿದವನಾಗಿದ್ದಾನೆಂದು ನೀವು ತಿಳಿದಿದ್ದೀರಿ" (1 ಯೋಹಾ. 2:28–29).

28) "ಪಾಪಮಾಡುವ ಪ್ರತಿಯೊಬ್ಬನು ಅಧರ್ಮವನ್ನು ಮಾಡುವವನಾಗಿದ್ದಾನೆ; ಪಾಪವು ಅಧರ್ಮವೇ. ಪಾಪಗಳನ್ನು ಹೋಗಲಾಡಿಸುವದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನೆಂಬದು ನಿಮಗೆ ಗೊತ್ತಾಗಿದೆ; ಆತನಲ್ಲಿ ಪಾಪವಿಲ್ಲ. ಆತನಲ್ಲಿ ನೆಲೆಗೊಂಡಿರುವವನು ಪಾಪಮಾಡನು; ಪಾಪಮಾಡುವವನು ಆತನನ್ನು ಕಂಡವನೂ ಅಲ್ಲ, ತಿಳಿದವನೂ ಅಲ್ಲ. ಪ್ರಿಯರಾದ ಮಕ್ಕಳೇ, ನಿಮ್ಮನ್ನು ಸನ್ಮಾರ್ಗದಿಂದ ತಪ್ಪಿಸುವದಕ್ಕೆ ಯಾರಿಗೂ ಅವಕಾಶ ಕೊಡಬೇಡಿರಿ. ಕ್ರಿಸ್ತನು ಹೇಗೆ ನೀತಿವಂತನಾಗಿದ್ದಾನೋ ಹಾಗೆಯೇ ನೀತಿಯನ್ನನುಸರಿಸುವವನು ನೀತಿವಂತನಾಗಿದ್ದಾನೆ. ಪಾಪ ಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ; ಆದಿಯಿಂದಲೂ ಸೈತಾನನು ಪಾಪಮಾಡುವವನಾಗಿದ್ದಾನಲ್ಲಾ. ಸೈತಾನನ ಕೆಲಸಗಳನ್ನು ಲಯಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು. ದೇವರಿಂದ ಹುಟ್ಟಿದವನು ಪಾಪಮಾಡನು; ದೇವರ ಜೀವವು ಅವನಲ್ಲಿ ನೆಲೆಗೊಂಡದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು. ಇವರು ದೇವರ ಮಕ್ಕಳೆಂಬದೂ ಅವರು ಸೈತಾನನ ಮಕ್ಕಳೆಂಬದೂ ಇದರಿಂದ ವ್ಯಕ್ತವಾಗುತ್ತದೆ. ನೀತಿಯನ್ನು ಅನುಸರಿಸದವನೂ ತನ್ನ ಸಹೋದರನನ್ನು ಪ್ರೀತಿಸದವನೂ ದೇವರಿಂದ ಹುಟ್ಟಿದವರಲ್ಲ. ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬದೇ ನೀವು ಮೊದಲಿನಿಂದಲೂ ಕೇಳಿದ ವಾಕ್ಯವಾಗಿದೆ. ಕೆಡುಕನಿಂದ ಹುಟ್ಟಿ ತನ್ನ ತಮ್ಮನನ್ನು ಕೊಂದುಹಾಕಿದ ಕಾಯಿನನಂತೆ ನಾವು ಇರಬಾರದು. ಯಾವ ಕಾರಣದಿಂದ ಅವನನ್ನು ಕೊಂದುಹಾಕಿದನು? ತನ್ನ ಕೃತ್ಯಗಳು ಕೆಟ್ಟವುಗಳೂ ತನ್ನ ತಮ್ಮನ ಕೃತ್ಯಗಳು ನೀತಿಗೆ ಸರಿಯಾದವುಗಳೂ ಆಗಿದ್ದದರಿಂದಲೇ" (1 ಯೋಹಾ. 3:4–12).

29) "ಕ್ರಿಸ್ತನು ಪ್ರತ್ಯಕ್ಷನಾದನೆಂಬದು ನಿಮಗೆ ಗೊತ್ತಾಗಿದೆ; ಆತನಲ್ಲಿ ಪಾಪವಿಲ್ಲ. ಆತನಲ್ಲಿ ನೆಲೆಗೊಂಡಿರುವವನು ಪಾಪಮಾಡನು; ಪಾಪಮಾಡುವವನು ಆತನನ್ನು ಕಂಡವನೂ ಅಲ್ಲ, ತಿಳಿದವನೂ ಅಲ್ಲ. ಪ್ರಿಯರಾದ ಮಕ್ಕಳೇ, ನಿಮ್ಮನ್ನು ಸನ್ಮಾರ್ಗದಿಂದ ತಪ್ಪಿಸುವದಕ್ಕೆ ಯಾರಿಗೂ ಅವಕಾಶ ಕೊಡಬೇಡಿರಿ. ಕ್ರಿಸ್ತನು ಹೇಗೆ ನೀತಿವಂತನಾಗಿದ್ದಾನೋ ಹಾಗೆಯೇ ನೀತಿಯನ್ನನುಸರಿಸುವವನು ನೀತಿವಂತನಾಗಿದ್ದಾನೆ. ಪಾಪ ಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ; ಆದಿಯಿಂದಲೂ ಸೈತಾನನು ಪಾಪಮಾಡುವವನಾಗಿದ್ದಾನಲ್ಲಾ. ಸೈತಾನನ ಕೆಲಸಗಳನ್ನು ಲಯಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು. ದೇವರಿಂದ ಹುಟ್ಟಿದವನು ಪಾಪಮಾಡನು; ದೇವರ ಜೀವವು ಅವನಲ್ಲಿ ನೆಲೆಗೊಂಡದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು. ಇವರು ದೇವರ ಮಕ್ಕಳೆಂಬದೂ ಅವರು ಸೈತಾನನ ಮಕ್ಕಳೆಂಬದೂ ಇದರಿಂದ ವ್ಯಕ್ತವಾಗುತ್ತದೆ. ನೀತಿಯನ್ನು ಅನುಸರಿಸದವನೂ ತನ್ನ ಸಹೋದರನನ್ನು ಪ್ರೀತಿಸದವನೂ ದೇವರಿಂದ ಹುಟ್ಟಿದವರಲ್ಲ. ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬದೇ ನೀವು ಮೊದಲಿನಿಂದಲೂ ಕೇಳಿದ ವಾಕ್ಯವಾಗಿದೆ. ಕೆಡುಕನಿಂದ ಹುಟ್ಟಿ ತನ್ನ ತಮ್ಮನನ್ನು ಕೊಂದುಹಾಕಿದ ಕಾಯಿನನಂತೆ ನಾವು ಇರಬಾರದು. ಯಾವ ಕಾರಣದಿಂದ ಅವನನ್ನು ಕೊಂದು ಹಾಕಿದನು? ತನ್ನ ಕೃತ್ಯಗಳು ಕೆಟ್ಟವುಗಳೂ ತನ್ನ ತಮ್ಮನ ಕೃತ್ಯಗಳು ನೀತಿಗೆ ಸರಿಯಾದವುಗಳೂ ಆಗಿದ್ದದರಿಂದಲೇ. ಸಹೋದರರೇ, ಲೋಕವು ನಿಮ್ಮನ್ನು ದ್ವೇಷಿಸಿದರೆ ಆಶ್ಚರ್ಯಪಡಬೇಡಿರಿ. ನಾವಂತೂ ಕ್ರೈಸ್ತಸಹೋದರರನ್ನು ಪ್ರೀತಿಸುವವರಾಗಿರುವದರಿಂದ ಮರಣದಿಂದ ಪಾರಾಗಿ ಜೀವದಲ್ಲಿ ಸೇರಿದ್ದೇವೆಂಬದು ನಮಗೆ ಗೊತ್ತಾಗಿದೆ. ಪ್ರೀತಿಸದೆ ಇರುವವನು ಮರಣದಲ್ಲೇ ಇದ್ದಾನೆ. ತನ್ನ ಸಹೋದರನನ್ನು ದ್ವೇಷಿಸುವವನು ಕೊಲೆಗಾರನಾಗಿದ್ದಾನೆ, ಮತ್ತು ಯಾವ ಕೊಲೆಗಾರನಲ್ಲಿಯೂ ನಿತ್ಯಜೀವವು ಇರುವದಿಲ್ಲವೆಂಬದು ನಿಮಗೆ ಗೊತ್ತಾಗಿದೆ. ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ. ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೇ? ಪ್ರಿಯರಾದ ಮಕ್ಕಳೇ, ನಾವು ಬರೀಮಾತಿನಿಂದಾಗಲಿ ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು" (1 ಯೋಹಾ. 3:5–18).

ಮುಂದುವರಿಯುವದು......

**ಪಾ॥ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

**ಡಿಜಿಎಮ್ ಬೇತೇಲ್ ಚರ್ಚ್ ಟ್ರಸ್ಟ್ (ರಿ)**
ಇದರ ವತಿಯಿಂದ ಆರಂಭಗೊಂಡಿರುವ ನೂತನ ಟಿವಿ ಚಾನೆಲ್
**ಆಸರೆ 24X7**
**ಸುವಾರ್ತೆಯೊಂದಿಗೆ ಸಮಾಜ ಸೇವೆ**
*Digital Set Top Box No. 883*
**ಡಿಜಿಎಮ್ ಬಿಸಿ ಟ್ರಸ್ಟ್ (ರಿ),** ಬೇತೇಲ್ ಚರ್ಚ್ ರಸ್ತೆ, ಇನ್ನಂಜೆ ಗ್ರಾಮ, ಯೇಸುಪುರ, ಶಂಕರಪುರ, ಉಡುಪಿ – 574115, ಕರ್ನಾಟಕ.
ದೂರವಾಣಿ ಸಂಖ್ಯೆ: 9902334941, 9844265602, 0820 2559202, 0820 2589070
Web: www.aasaretv.com

ಕುಣಿಯುತ್ತಾ ಆತನ ನಾಮವನ್ನು ಕೀರ್ತಿಸಲಿ; ದಮ್ಮಡಿಕಿನ್ನರಿಗಳಿಂದ ಆತನನ್ನು ಭಜಿಸಲಿ (ಕೀರ್ತ. 149:3).




**ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಆಂಗ್ಲಮಾಧ್ಯಮ ಸ್ಕೂಲ್‌ನ ನೊಂದಾವಣೆಯು ಪ್ರಾರಂಭವಾಗಿದೆ. ಎಲ್‌ಕೆಜಿ, ಯುಕೆಜಿ ಮಕ್ಕಳ ಹೆಸರನ್ನು ನೊಂದಾಯಿಸುವವರು ಈ ಕೆಳಗಿನ ಶಾಲೆಯ ಕಛೇರಿಗೆ ಬಂದು ಹೆಸರನ್ನು ನೊಂದಾಯಿಸಿರಿ.**

ಕಛೇರಿಯ ವಿಳಾಸ :
**ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಸ್ಕೂಲ್,**
ಯೇಸುಪುರ, ಶಂಕರಪುರ ಪೋಸ್ಟ್, ಇನ್ನಂಜೆ ಗ್ರಾಮ,
ಉಡುಪಿ–574115.



# ಸ್ಥಳೀಯ ಮತ್ತು ವಿದೇಶ ಸುದ್ದಿ

- ಕೇರಳದ ಕೊಲ್ಲಂ ಜಿಲ್ಲೆಯಲ್ಲಿ ಪುಟ್ಟಿಂಗಲ್ ದೇಗುಲದಲ್ಲಿ ಸುಡುಮದ್ದು ಪ್ರದರ್ಶನ ವೇಳೆ ದುರಂತ ಸಂಭವಿಸಿ 110 ಮಂದಿ ಬಲಿಯಾದ ಬೆನ್ನಲ್ಲೇ ಕೇರಳಾದ್ಯಂತ ಸೂರ್ಯಾಸ್ತದ ಬಳಿಕ ಶಬ್ದ ಮಾಡುವ ಪಟಾಕಿ ಸುಡುವುದಕ್ಕೆ ಹೈಕೋರ್ಟ್ ನಿಷೇಧ ಹೇರಿದೆ.
- ನೂರು ವರ್ಷಗಳಲ್ಲೇ ಭೀಕರ ಬರಗಾಲಕ್ಕೆ ತುತ್ತಾಗಿ ಹನಿ ನೀರು ಇಲ್ಲದೇ ಪರದಾಡುತ್ತಿರುವ ಮಹಾರಾಷ್ಟ್ರದ ಲಾತೂರ್ ಜಿಲ್ಲೆಗೆ ಪಶ್ಚಿಮ ಮಹಾರಾಷ್ಟ್ರದ ಮಿರಜ್‌ನಿಂದ ರೈಲಿನ ಮೂಲಕ ನೀರನ್ನು ಪೂರೈಸುವ ಮಹತ್ವಾಕಾಂಕ್ಷಿ ಉದ್ದೇಶ ಈಡೇರಿದೆ.
- ರಾಜ್ಯದ ರೈತರು ಸಹಕಾರಿ ಬ್ಯಾಂಕುಗಳಲ್ಲಿ ಮಾಡಿರುವ ಕೃಷಿ ಮತ್ತು ಕೃಷಿ ಸಂಬಂಧಿತ ಅಲ್ಪಾವಧಿ, ದೀರ್ಘಾವದಿ ಮತ್ತು ಮಧ್ಯಮಾವಧಿ ಸಾಲದ ಕಂತುಗಳನ್ನು ಮರು ಪಾವತಿಸುವ ಮೂಲಕ ಬಡ್ಡಿ ಮನ್ನಾ ಸೌಲಭ್ಯ ಪಡೆಯಲು ನಿಗದಿ ಪಡಿಸಲಾಗಿದ್ದ ಕಾಲಮಿತಿಯನ್ನು ರಾಜ್ಯ ಸರ್ಕಾರ ವಿಸ್ತರಣೆ ಮಾಡಿ ಆದೇಶ ಹೊರಡಿಸಿದೆ.
- 2006ಕ್ಕಿಂತ ಮುಂಚೆ ನಿವೃತ್ತಿಯಾದ ನೌಕರರ ಪಿಂಚಣಿ ಏರಿಕೆ ಮಾಡಿ ಕೇಂದ್ರ ಸರ್ಕಾರ ಆದೇಶಿಸಿದ್ದು, ಬಾಕಿ ಮೊತ್ತವನ್ನು ನೀಡಲು ಒಪ್ಪಿಗೆ ಸೂಚಿಸಿದೆ. ನಿವೃತ್ತಿಯಾಗುವ ವೇಳೆ 33 ವರ್ಷ ಸೇವೆ ಸಲ್ಲಿಸಿದವರು ಅಥವಾ ಮೂಲವೇತನದ ಅರ್ಧಕ್ಕಿಂತ ಕಡಿಮೆ ಪಿಂಚಣಿ ಪಡೆಯುವವರಿಗೆ ಹೆಚ್ಚುವರಿ ಏರಿಕೆ ಮಾಡಿ ಪೆನ್ಷನ್ ಹಾಗೂ ಪೆನ್ಷನರ್ಸ್ ವೆಲ್ಫೇರ್ ಇಲಾಖೆ ಆದೇಶ ಹೊರಡಿಸಿದೆ.
- ಗಡಿ ತಂಟೆ ಸೇರಿದಂತೆ ಒಂದಿಲ್ಲೊಂದು ತಂಟೆ ನಡೆಸುವ ಚೀನಾಕ್ಕೆ ಭಾರತ ಪ್ರಬಲ ತಿರುಗೇಟು ನೀಡಿದೆ. ಭಾರತದ ಸೇನಾನೆಲೆಯನ್ನು ಅಮೆರಿಕದ ಪಡೆಗಳು ಬಳಸಿಕೊಳ್ಳುವಂತೆ ಒಪ್ಪಂದ ಏರ್ಪಟ್ಟಿದ್ದು, ಇದರಿಂದ ಎರಡೂ ದೇಶಗಳ ಸೇನಾಪಡೆಗಳಿಗೆ ಅನುಕೂಲವಾಗಲಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಆದರೂ ಸರ್ಕಾರದ ಆಹ್ವಾನದ ಮೇರೆಗೆ ಅಮೆರಿಕದ ಪಡೆಗಳು ಸೇನಾನೆಲೆಗೆ ಪ್ರವೇಶಿಸಬಹುದಾಗಿದೆ.
- ರಾಷ್ಟ್ರಪ್ರೇಮದ ಬಗ್ಗೆ ಇದೀಗ ವ್ಯಾಪಕ ಚರ್ಚೆಗಳು ನಡೆಯುತ್ತಿರುವಂತೆ, ರಾಷ್ಟ್ರಧ್ವಜ, ರಾಷ್ಟ್ರಗೀತೆಗೆ ಅಗೌರವ ತೋರುವ ಪ್ರಕರಣಗಳೂ ವರದಿಯಾಗುತ್ತಿವೆ. ಈ ಹಿನ್ನಲೆಯಲ್ಲಿ ಕಾನೂನಿನ್ವಯ ಕಠಿನ ಕ್ರಮಕೈಗೊಳ್ಳುವಂತೆ ರಾಜ್ಯಗಳಿಗೆ ಕೇಂದ್ರ ಸರಕಾರ ಸೂಚಿಸಿದೆ.
- ಭಾರತದ ಉತ್ತರ ಮತ್ತು ಪಶ್ಚಿಮ ಭಾಗದ ಹಲವೆಡೆ, ಪಾಕಿಸ್ಥಾನ ಹಾಗೂ ಅಫ್ಘಾನಿಸ್ತಾನದಲ್ಲಿ ಭೂಕಂಪವಾಗಿದೆ. ಕಂಪನದಿಂದ ಪಾಕ್‌ನಲ್ಲಿ ಇಬ್ಬರು ಬಲಿಯಾಗಿದ್ದಾರೆ. ದಿಲ್ಲಿ ಸೇರಿದಂತೆ ಉತ್ತರ ಭಾರತದಲ್ಲಿ ಭೂಕಂಪದ ಕಾರಣ ಜನಜೀವನ ಅಸ್ತವ್ಯಸ್ತಗೊಂಡಿತು.

ಭಕ್ತರು ತಮಗುಂಟಾದ ಮಹಿಮೆಯಲ್ಲಿ ಹಿಗ್ಗಲಿ; ಹಾಸಿಗೆಯ ಮೇಲಿರುವಾಗಲೂ
ಉತ್ಸಾಹಧ್ವನಿ ಮಾಡಲಿ (ಕೀರ್ತ. 149:5).

# ಬಿಡುಗಡೆಯ ಕುಟುಂಬ

**ವಯಸ್ಕರ ಸ್ವರ**

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

3) **ಕುಟುಂಬದಲ್ಲಿ ಮಕ್ಕಳ ಪಾತ್ರ :–** ಮಕ್ಕಳು ತಂದೆ ತಾಯಿಗಳ ಮಾತನ್ನು ಕೇಳಿ ತಮ್ಮ ತಂದೆ ತಾಯಿಗಳಿಗೆ ಅಧೀನರಾಗಬೇಕಾಗಿದೆ (ಎಫೆ. 6:1). ತಂದೆ ತಾಯಿಗಳನ್ನು ಸನ್ಮಾನಿಸಬೇಕೆಂದು ದೇವರ ಆಜ್ಞೆ ಇದೆ. "ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು ಸನ್ಮಾನಿಸಿದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ನೀನು ಬಹುಕಾಲ ಇರುವಿ" (ವಿಮೋ. 20:12). ಇದು ಬರೀ ಆಜ್ಞೆ ಅಲ್ಲ, ವಾಗ್ದಾನ ಸಹಿತವಾದ ಆಜ್ಞೆ, ಸನ್ಮಾನಿಸಿದರೆ ಮೇಲು ಎಂದು ವಾಗ್ದಾನ ಕೂಡಾ ಕೊಡಲ್ಪಟ್ಟಿದೆ (ಎಫೆ. 6:2). ಯೇಸು ಬಾಲಕನಾಗಿರುವಾಗ ತನ್ನ ತಂದೆ ತಾಯಿಗಳಿಗೆ ಅಧೀನನಾಗಿ ಜೀವಿಸಿದನು (ಲೂಕ. 2:51). ಸಂಸೋನನು ತನ್ನ ತಂದೆ ತಾಯಿಗಳಿಗೆ ತಾನು ಸತ್ತ ಸಿಂಹದ ಒಡಲಿನಿಂದ ಜೇನನ್ನು ತಿಂದದ್ದನ್ನು ಬಚ್ಚಿಟ್ಟಿದ್ದರಿಂದ ಮಾರ್ಗ ತಪ್ಪಿದನು (ನ್ಯಾಯ. 14:6–9). ಮಕ್ಕಳೇ ನೀವು ಎಷ್ಟೇ ವಿದ್ಯಾವಂತರಾಗಿದ್ದರೂ ನಿಮ್ಮ ತಂದೆ ತಾಯಿಗಳ ಮಾರ್ಗದರ್ಶನ ಅವಶ್ಯವಾಗಿ ಬೇಕಾಗಿದೆ. ಸಭೆಯಲ್ಲಿರುವ ಆತ್ಮೀಕ ಮಕ್ಕಳು ತಮ್ಮ ಆತ್ಮೀಕ ತಂದೆ ತಾಯಿಗಳಿಗೆ (ಸಭಾಪಾಲಕ ಹಾಗೂ ಸಭಾಪಾಲಕಿ) ಸನ್ಮಾನಿಸಿದರೆ ಖಂಡಿತ ಆಶೀರ್ವಾದವಾಗಿ ಜೀವಿಸಬಹುದಾಗಿದೆ. ಕೆಲವು ಸಮಯದಲ್ಲಿ ಆತ್ಮೀಕ ತಂದೆ ತಾಯಿಗಳನ್ನು ಲೆಕ್ಕಿಸದೆ ಅವರನ್ನು ನೋಯಿಸಿ ಕರ್ತನ ಆಶೀರ್ವಾದಗಳನ್ನು ಕಳೆದು ಕೊಳ್ಳುವವರಾಗಿರುತ್ತೇವೆ. ಪೋಷಿಸಿದ ತಮ್ಮ ಮಕ್ಕಳೇ, ತಂದೆ ತಾಯಿಗಳಿಗೆ ಎದುರುಬಿದ್ದು ನಡೆಯುವಾಗ ಆಗುವಂತಹ ಹೃದಯದ ನೋವು ತಡೆಯಲು ಆಗುವುದಿಲ್ಲ. ನನ್ನ ಸೇವೆ ಜೀವಿತದಲ್ಲಿ ನಾನು ಅತಿಯಾಗಿ ಪ್ರೀತಿಸಿದ ಆತ್ಮೀಕ ಮಕ್ಕಳು ನನ್ನನ್ನು ತಿರಸ್ಕರಿಸಿ, ಮರೆತು ಬಿಟ್ಟಾಗ ಆದಂತಹ ನೋವು ಬಹಳ ಶೋಚನಿಯವಾಗಿತ್ತು.

"ನಿಮ್ಮ ಸಭಾನಾಯಕರಿಗೆ ಅಧೀನರಾಗಿರಿ. ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿರುತ್ತಾರೆ. ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ. ಅವರು ವ್ಯಸನದಿಂದಿರುವುದು ನಿಮಗೆ ಪ್ರಯೋಜಕರವಾದುದ್ದಲ್ಲ" (ಇಬ್ರಿ. 13:17). ದೇವ ಮಕ್ಕಳೇ, ನಿಮ್ಮ ಹೆತ್ತ ತಂದೆ ತಾಯಿಗಳಿಗಾಗಲಿ, ಆತ್ಮೀಕ ತಂದೆ ತಾಯಿಗಳಿಗಾಗಲಿ ಅವರಿಗೆ ಅವಿಧೇಯರಾಗಿ ಜೀವಿಸಬೇಡಿರಿ. 'ತಂದೆಯನ್ನು ಹಾಸ್ಯಮಾಡಿ ತಾಯಿಯ ಅಪ್ಪಣೆಯನ್ನು ದಿಕ್ಕರಿಸುವವನ ಕಣ್ಣನ್ನು ಹಳ್ಳಕೊಳ್ಳದ ಕಾಗೆಗಳು ಕುಕ್ಕುವವು. ರಣಹದ್ದುಗಳು ತಿಂದು ಬಿಡುವುದು' (ಜ್ಞಾನೋ. 30:17).

4) **ಕುಟುಂಬದಲ್ಲಿ ಕರ್ತನು ಏನಾಗಿದ್ದಾನೆ :–** ಕುಟುಂಬದಲ್ಲಿ ಕರ್ತನದೇ ಮುಖ್ಯ ಪಾತ್ರ. ಆತನಿಲ್ಲದಿದ್ದರೆ ಅದು ಕುಟುಂಬವಾಗಿರಲು ಸಾಧ್ಯವಿಲ್ಲ. ಮನುಷ್ಯನು ಮನೆಯನ್ನು ಸಾಲ ಮಾಡಿಯಾದರೂ ಹೇಗೂ ಕಟ್ಟಬಹುದು. ಆದರೆ ಮನುಷ್ಯನು ಕುಟುಂಬ ಕಟ್ಟಲು ಸಾಧ್ಯವಿಲ್ಲ. ಅದಕ್ಕೆ ಕರ್ತನ ಸಹಾಯಬೇಕು. ಎಲ್ಲಿ ಇಬ್ಬರು ಮೂವರು ಕೂಡಿ ಬರುತ್ತಾರೆ ಅಲ್ಲಿ ನಾನಿರುತ್ತೇನೆಂದು ಕರ್ತನು ತಾನೇ ಹೇಳುತ್ತಾನೆ (ಮತ್ತಾ. 18:20). 128 ಕೀರ್ತನೆಯಲ್ಲಿ ಕರ್ತನಲ್ಲಿ ಭಯಭಕ್ತಿಯುಳ್ಳ ಕುಟುಂಬದ ಅಶೀರ್ವಾದ ಕುರಿತಾಗಿ ಚೆನ್ನಾಗಿ ವರ್ಣಿಸಲ್ಪಟ್ಟಿರುತ್ತದೆ. ಕರ್ತನಲ್ಲಿ ಭಯಭಕ್ತಿಯುಳ್ಳವರಾಗಿರುವುದಾದರೆ ನೀನು ಕಷ್ಟಪಟ್ಟದ್ದನ್ನು, ನೀನು, ಕುಟುಂಬವು ಅನುಭವಿಸಲು ಸಾಧ್ಯ ಹಾಗೂ ಆಶೀರ್ವದಿಸಲ್ಪಡುವಿ. ಸತ್ಯವೇದದಲ್ಲಿ ಕೊರ್ನೇಲ್ಯನ ಕುಟುಂಬದ ಕುರಿತಾಗಿ ಬರೆಯಲ್ಪಟ್ಟಿದೆ. ಕೊರ್ನೇಲ್ಯನು ತನ್ನ ಮನೆಯವರೆಲ್ಲರ ಸಹಿತ ದೇವರಿಗೆ ಭಯಪಡುತ್ತಿದ್ದನು (ಅ.ಕೃ. 10:2). ಯೋಬನು ಸಹ ದೇವರಲ್ಲಿ ಭಯಪಡುವವನಾಗಿದ್ದು ತನ್ನ ಮಕ್ಕಳು ಹೃದಯದಲ್ಲಿ ದೇವರನ್ನು ದೂಷಿಸಿ ಪಾಪ ಮಾಡಿರಬಹುದೆಂಬ ಭಯದಿಂದ ಮಕ್ಕಳನ್ನು ಕರಿಸಿ ಶುದ್ಧೀಕರಿಸಿ ಅವರ ಸಂಖ್ಯೆಗೆ ತಕ್ಕಂತೆ ಹೋಮಗಳನ್ನು ಅರ್ಪಿಸುತ್ತಿದ್ದನು (ಯೋಬ. 1:5). ಪ್ರಿಯ ಕ್ರಿಸ್ತನಲ್ಲಿರುವ ತಂದೆ ತಾಯಿಗಳೇ, ನಿಮ್ಮ ಮಕ್ಕಳಿಗಾಗಿ ಬರೀ ಹಣ, ಆಸ್ತಿ ಸಂಗ್ರಹಿಸುವುದು ಮಾತ್ರ ನಿಮ್ಮ ಜವಾಬ್ದಾರಿ ಅಲ್ಲದೆ ನಿಮ್ಮ ಮಕ್ಕಳು ಕರ್ತನಲ್ಲಿ, ದೇವರ ರಾಜ್ಯದಲ್ಲಿ ಎಷ್ಟು ಬೆಳೆಯುತ್ತಾರೆ ಎಂಬುವುದನ್ನು ತಿಳಿದುಕೊಳ್ಳಿರಿ. ವಾರದಲ್ಲಿ 1 ದಿನವಾದರೂ ನಿಮ್ಮ ಮಕ್ಕಳಿಗಾಗಿ ಉಪವಾಸ ಮಾಡಿ ಪ್ರಾರ್ಥಿಸುವುದನ್ನು ಮರೆಯಬೇಡಿ. ಕರ್ತನ ಭಯವೇ ನಿಜವಾದ ಜ್ಞಾನವೆಂದು ಸತ್ಯವೇದ ತಿಳಿಸುತ್ತದೆ (ಜ್ಞಾನೋ.

ಅವರ ಬಾಯಲ್ಲಿ ಯೆಹೋವನ ಸ್ತೋತ್ರವೂ ಕೈಯಲ್ಲಿ ಇಬ್ಬಾಯಿಕತ್ತಿಯೂ ಇರಲಿ (ಕೀರ್ತ. 149:6).

9:10). ಮಕ್ಕಳು ತಪ್ಪುಮಾಡುವಾಗ ಅದಕ್ಕೆ ಸರಿಯಾಗಿ ಅವರನ್ನು ಶಿಕ್ಷಿಸಬೇಕು. "ಹುಡುಗನ ಶಿಕ್ಷೆಗೆ ಹಿಂತೆಗೆಯಬೇಡ; ಬೆತ್ತದ ಏಟಿಗೆ ಸಾಯನು. ಬೆತ್ತದಿಂದ ಹೊಡೆ; ಅವನ ಆತ್ಮವನ್ನು ಪಾತಾಳಕ್ಕೆ ಬೀಳದಂತೆ ಕಾಪಾಡು" (ಜ್ಞಾನೋ. 23:13–14). ಕೆಲವು ತಂದೆ ತಾಯಿಗಳು ತಮ್ಮ ಮಕ್ಕಳನ್ನು ಯಾವಾಗಲೂ ಶಪಿಸುತ್ತಲೇ ಇರುವರು. ತಂದೆ ತಾಯಿಗಳೇ ನಿಮ್ಮ ಮಕ್ಕಳು ಶಾಪವಲ್ಲ, ಬದಲಾಗಿ ಯೆಹೋವನ ಆಶೀರ್ವಾದವಾಗಿದ್ದಾರೆ (ಕೀರ್ತ. 127:3). ತಂದೆ ತಾಯಿ ದೇವರಲ್ಲಿ ಭಯಭಕ್ತಿಯುಳ್ಳವರಾಗಿರುವುದಾದರೆ ಮಕ್ಕಳು ಭಯಭಕ್ತಿಯುಳ್ಳವರಾಗಿರುವರು. ಮಕ್ಕಳಿಗೆ ನೀವೇ ಮಾದರಿಯಾಗಿರಿ. ಕೆಲವು ತಂದೆ ತಾಯಿಗಳು ತಮ್ಮ ಮಕ್ಕಳು ಭಾನುವಾರ ಆರಾಧನೆಗೆ ಬರುತ್ತಾರೋ ಇಲ್ಲವೋ ಎಂದು ನೋಡಿಕೊಳ್ಳುವಷ್ಟು ಸಮಯವಿರುವುದಿಲ್ಲ. ಪ್ರಿಯರೇ, ಇಂದು ನಿಮ್ಮ ಮಕ್ಕಳನ್ನು ಕರ್ತನಲ್ಲಿ ಬೆಳೆಸಿ ಬಾಲೋಪದೇಶ, ಬಾಲಶಿಕ್ಷೆ ಕೊಟ್ಟು ಕರ್ತನಲ್ಲಿ ಬೆಳೆಸುವಿರಾದರೆ ಅವನು ಮುಪ್ಪಿನಲ್ಲಿಯೂ ಓರೆಯಾಗನು (ಜ್ಞಾನೋ. 22:6).

**ಪಾ|| ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

---

**ಪ್ರಾರ್ಥನಾ ಮನವಿಗಳು**

- ಬೇಸಿಗೆ ಕಾಲದಲ್ಲಿ ಮಕ್ಕಳಿಗೆ ಯಾವ ಖಾಯಿಲೆಯೂ ಬಾರದ ಹಾಗೆ ಪ್ರಾರ್ಥಿಸಿರಿ.
- ಭಾರತ ದೇಶದ ರಕ್ಷಣೆಗಾಗಿ ಪ್ರಾರ್ಥಿಸಿರಿ, ಕರ್ತನ ಕೃಪೆಯನ್ನು ದೇಶದ ಮೇಲೆ ಕೇಳಿಕೊಳ್ಳೋಣ.
- ಸಭೆಗಳ ಉಜ್ಜೀವನಕ್ಕಾಗಿ, ಸೇವೆಗಳು ಆಶೀರ್ವದಿಸಲ್ಪಡುವದಕ್ಕಾಗಿ ಪ್ರಾರ್ಥಿಸಿರಿ.
- ಕರ್ತನು ತಕ್ಕ ಸಮಯದಲ್ಲಿ ಮಳೆಯನ್ನು ಸುರಿಸಲು ಪ್ರಾರ್ಥಿಸಿರಿ.
- ರೈತರುಗಳ ಹಿತರಕ್ಷಣೆಗಾಗಿ ಮತ್ತು ಬೆಳೆಗಳ ಸಮೃದ್ಧಿ ಹಾಗೂ ಸಂರಕ್ಷಣೆಗಾಗಿ ಕರ್ತನ ಬಳಿಯಲ್ಲಿ ಪ್ರಾರ್ಥಿಸೋಣ.
- ದೇಶದಲ್ಲಿರುವ ಯೌವನಸ್ಥ ಮಕ್ಕಳ ಪರಿಶುದ್ಧತೆಗಾಗಿ, ಸುರಕ್ಷತೆಗಾಗಿ ಮತ್ತು ಅಭ್ಯುದಯಕ್ಕಾಗಿ ಪ್ರಾರ್ಥಿಸೋಣ.
- ಭಾರತ ದೇಶದಲ್ಲಿ ಬಿಸಿಲಿನ ತಾಪದಿಂದ ಬಳಲುತ್ತಿರುವ ಹಾಗೂ ಸಾವನ್ನಪ್ಪುತ್ತಿರುವ ಜನರಿಗಾಗಿ, ದೇವರು ವಾತವರಣವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ನಡೆಸುವಂತೆ ಪ್ರಾರ್ಥಿಸೋಣ.

---

**ಡಿಜಿಎಮ್ ಬೇತೇಲ್ ಚರ್ಚ್ ಅರ್ಪಿಸುವ**

# 3 ದಿವಸದ

# ಬಿಡುಗಡೆ ಹಾಗೂ ಸ್ವಸ್ಥತೆಯ ಕೂಟಗಳು

**ದಿನಾಂಕ: 27.05.16 ರಿಂದ 29–05–2016ರ ವರೆಗೆ ಸಮಯ : ಬೆಳಿಗ್ಗೆ ಗಂಟೆ 10–00 ರಿಂದ**
**ಸ್ಥಳ: ಬೇತೇಲ್ ಚರ್ಚ್ ಯೇಸುಪುರ, ಶಂಕರಪುರ – 574115, ಉಡುಪಿ ಜಿಲ್ಲೆ**
**ನೀವು ಬಂದು ದೇವರ ಆಶೀರ್ವಾದವನ್ನು ಹೊಂದಿಕೊಳ್ಳಿರಿ, ಇತರರನ್ನು ನಿಮ್ಮೊಂದಿಗೆ ಕರೆತನ್ನಿರಿ.**
**ಹೆಚ್ಚಿನ ವಿವರಗಳಿಗಾಗಿ 0091 9902334941, 0091 9964070654ನ್ನು ಸಂಪರ್ಕಿಸಿರಿ.**

---

ಅವರು ಜನಾಂಗಗಳಿಗೆ ಮುಯ್ಯಿತೀರಿಸುವರು; ಅನ್ಯಜನಗಳನ್ನು ದಂಡಿಸುವರು
(ಕೀರ್ತ. 149:7).

ಆರೋಗ್ಯ ಸ್ವರ

# ಎಲೆಲೆ..... ಇದು ಸೀಬೆ 'ಎಲೆ'

.ಹಣ್ಣುಗಳು ನಮ್ಮ ದೇಹದ ಆರೋಗ್ಯ ಸುಧಾರಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ದೇಹಕ್ಕೆ ಶಕ್ತಿ ಒದಗಿಸುವ ಶಕ್ತಿ ಮೂಲಗಳೆಂದೂ ಹೇಳಲಾಗುತ್ತದೆ. ಎಲ್ಲ ಬಗೆಯ ಆಹಾರ ಪದಾರ್ಥಗಳನ್ನು ತಿಂದರೂ, ಹಣ್ಣುಗಳಿಗೆ ತನ್ನದೇ ವೈಶಿಷ್ಟ್ಯ ಪೂರ್ಣ ಮಹತ್ವವಿದೆ. ವೈದ್ಯರನ್ನು ದೂರವಿಡಲು ದಿನಕ್ಕೊಂದು ಸೇಬು ತಿನ್ನಬೇಕು, ಹೊಟ್ಟೆಯಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಬಾಳೆಹಣ್ಣು ತಿನ್ನಬೇಕು, ತ್ವಚೆಯ ಕಾಂತಿ ವೃದ್ಧಿಗೆ ದಾಳಿಂಬೆ ಸಹಕಾರಿ ಎಂಬ ಮಾತುಗಳು ಸಾಮಾನ್ಯವಾಗಿ ಕೇಳಿ ಬರುತ್ತವೆ. ಇದೇ ಸಾಲಿಗೆ ಈಗ ಹೊಸ ಹಣ್ಣು, ಸೀಬೆ ತಿನ್ನಿ, ಮಧುಮೇಹ ನಿಯಂತ್ರಿಸಿ ಎಂಬುದೂ ಸೇರ್ಪಡೆಯಾಗಿದೆ.

ಸೀಬೆ ಹಣ್ಣಿನಲ್ಲಿ ಯಥೇಚ್ಛವಾಗಿ 'ಸಿ' ವಿಟಮಿನ್ ಇದ್ದು, ಅದು ದೇಹದ ಆರೋಗ್ಯ ರಕ್ಷಣೆಯಲ್ಲಿ ಉಪಕಾರಿಯಾಗಿದೆ. ಸೀಬೆ ಹಣ್ಣಿನಂತೆ, ಕಾಯಿಗೂ ಬೇಡಿಕೆ ಹೆಚ್ಚಾಗಿದೆ. ಕಾಯಿ ತಿಂದರೆ, ಮಧುಮೇಹ ನಿಯಂತ್ರಣಕ್ಕೆ ಹೆಚ್ಚು ಸಹಕಾರಿ ಎಂಬ ಮಾತಿದೆ.

ಸೀಬೆಯಲ್ಲಿ ಅಗಾಧ ಪ್ರಮಾಣದಲ್ಲಿ ರೋಗ ನಿರೋಧಕ ಶಕ್ತಿ ಇದ್ದು, ಮಿತವಾಗಿ ಬಳಸಿದರೆ, ಆರೋಗ್ಯ ವೃದ್ಧಿಗೆ ಸಹಕಾರಿ. ಸೀಬೆಹಣ್ಣಿನ ಬೆಲೆ ಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆಯಲ್ಲಿ ಒಂದು ಕಿ.ಗ್ರಾಂ.ಗೆ 100 ರೂ.ಗಳವೆರಗೂ ಏರಿಕೆಯಾಗಿತ್ತು. ಸೇಬಿಗಿಂತ ಸೀಬೆ ದುಬಾರಿ ಎಂಬ ಆರೋಪ ಗ್ರಾಹಕರದ್ದಾಗಿತ್ತು.

ಸೀಬೆ ಹಣ್ಣು ವಸಡು ಸಮಸ್ಯೆಗಳಿಗೂ ಪರಿಹಾರ ರೂಪದಂತಿದೆ. ಚಾಕಲೇಟ್ ಮುಂತಾದ ಸಿಹಿ ಪದಾರ್ಥಗಳನ್ನು ಹೆಚ್ಚಾಗಿ ತಿನ್ನುವವರನ್ನು ವಸಡಿನ ಸಮಸ್ಯೆ ಕಾಡುತ್ತದೆ. ಅಂತಹವರು ಸೀಬೆಕಾಯಿ ತಿಂದರೆ ಒಳ್ಳೆಯದು.

ಇನ್ನು ಸೀಬೆ ಎಲೆಗಳಲ್ಲೂ ಔಷಧೀಯ ಗುಣಗಳಿರುವುದು ಬೆಳಕಿಗೆ ಬಂದಿದೆ. ಜ್ವರ ದೂರ ಮಾಡಲು ಹಿಂದಿನ ಕಾಲದಲ್ಲಿ ಸೀಬೆ ಎಲೆಗಳನ್ನು ಬಳಸುತ್ತಿದ್ದರು. ಇದು ಉರಿಯೂತವನ್ನು ನಿವಾರಿಸುವುದರ ಜತೆಗೆ ಮಧುಮೇಹವನ್ನು ಮತ್ತು ರಕ್ತದೊತ್ತಡವನ್ನು ನಿಯಂತ್ರಣದಲ್ಲಿಡಲಿದೆ. ಊಟದ ನಂತರ, ಸೀಬೆ ಎಲೆ ಹಾಕಿ ಬೇಯಿಸಿದ ನೀರು ಕುಡಿದರೆ, ಮಧುಮೇಹದ ಇತರೆ ಲಕ್ಷಣಗಳಾದ ಹೈಪರ್ಗ್ಲೆಸೀಮಿಯಾ, ಹೈಪರ್ ಇನ್ಸುಲೇಮಿಯಾ, ಇನ್ಸುಲಿನ್ ಪ್ರತಿರೋಧ ಮತ್ತು ಅಧಿಕ ಕೊಬ್ಬಿನ ಪ್ರಮಾಣವನ್ನು ಹತೋಟಿಗೆ ತರಲಿದೆ. ರಕ್ತದಲ್ಲಿರುವ ಗ್ಲುಕೋಸ್ ಮಟ್ಟವನ್ನು ನಿಯಂತ್ರಿಸುವದು ಮಾತ್ರವಲ್ಲ, ರಕ್ತದಲ್ಲಿನ ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಲಿದೆ. ಸೀಬೆ ಎಲೆ ಸೇವನೆಯಿಂದ ಯಾವುದೇ ಅಡ್ಡಿ ಪರಿಣಾಮಗಳು ದೇಹದ ಮೇಲೆ ಉಂಟಾಗುವುದಿಲ್ಲ. ದೇಹದಲ್ಲಿನ ವಿಷಕಾರಿ ಅಂಶಗಳನ್ನು ಹೊರ ಹಾಕುವ ಗುಣ ಸೀಬೆ ಎಲೆಗಳಲ್ಲಿದೆ.

ಸೀಬೆ ಎಲೆ ಮಧುಮೇಹ ನಿಯಂತ್ರಕವಲ್ಲದೆ, ಅಧಿಕ ಕೊಬ್ಬು, ನಿವಾರಕದಂತೆಯೂ ಕಾರ್ಯ ನಿರ್ವಹಿಸುತ್ತದೆ. ಸೀಬೆ ಎಲೆಯ ಸಾರ ತಯಾರಿಸುವುದು ಸುಲಭ. ಸೀಬೆ ಎಲೆಗಳನ್ನು ಚೆನ್ನಾಗಿ ನೀರಿನಲ್ಲಿ ತೊಳೆಯಬೇಕು. ಆ ನಂತರ ಅವುಗಳನ್ನು ಜಜ್ಜಿ ನೀರಿನಲ್ಲಿ ಬೇಯಿಸಿ ತಣ್ಣಗಾದ ಮೇಲೆ ಕುಡಿಯಬೇಕು.

ದಿನಕ್ಕೆ ಕನಿಷ್ಠ ಮೂರು ಬಾರಿ ಕುಡಿಯಬೇಕು. ಖಾಲಿ ಹೊಟ್ಟೆಗೆ ಕುಡಿದರೆ ಇನ್ನು ಒಳ್ಳೆಯದಂತೆ. ಸೀಬೆ ಎಲೆಯಲ್ಲಿನ ರೋಗ ನಿರೋಧಕ ಗುಣಗಳ ಬಗ್ಗೆ ಜಪಾನಿನ ಯಾಕುಲ್ಟ್ ಕೇಂದ್ರ ವಿದ್ಯಾಲಯ ಸಂಶೋಧನೆ ನಡೆಸಿದ್ದು, ಆ ಮೂಲಕ ಹೆಚ್ಚಿನ ಬೆಳಕು ಚೆಲ್ಲಲಾಗಿದೆ.

# ಖಾಲಿ ಹೊಟ್ಟೆಗೆ ಟೀ ಸೇರಿದರೆ ಆಪತ್ತು !

ಭಾರತದ ಅತ್ಯಂತ ಜನಪ್ರಿಯ ಪೇಯ ಚಹಾ ಅಥವಾ ಟೀ ಕುಡಿಯುವ ಮಂದಿ ಭಾರತದಲ್ಲಿ ವಿರಳ. ಯಾವುದೇ ಹೋಟಲಿಗೆ ಹೋದರು ಕಾಫಿ, ಟೀ ಸಿಗತ್ತದೆ.

ಭಾರತೀಯರಿಗೆ ಚಹಾ ಅತ್ಯಂತ ಪ್ರಿಯವಾದದ್ದು. ಒಂದು ಸಮೀಕ್ಷೆ ಪ್ರಕಾರ ಶೇಕಡ ತೊಂಬತ್ತಕ್ಕೂ ಹೆಚ್ಚು ಭಾರತೀಯರು ದಿನಕ್ಕೆ ಕನಿಷ್ಠ ಮೂರು ಕಪ್ ಚಹಾ ಕುಡಿಯುತ್ತಾರೆ. ಇಷ್ಟೆಲ್ಲಾ ಜನಪ್ರಿಯ ಪೇಯವಾದ ಚಹಾವನ್ನು ಖಾಲಿ ಹೊಟ್ಟೆಗೆ ಸೇರಿಸಬಾರದು. ಕೆಲವರಂತೂ ಎದ್ದ ತಕ್ಷಣ ಹಾಸಿಗೆಯಲ್ಲೇ ಟೀ ಕುಡಿಯುತ್ತಾರೆ. ತಜ್ಞರ ಪ್ರಕಾರ ಖಾಲಿ ಹೊಟ್ಟೆಯಲ್ಲಿ ಟೀ ಸೇವನೆ ಅನಾರೋಗ್ಯಕರ ಅಭ್ಯಾಸ. ಅದರಲ್ಲೂ ಬೇಸಿಗೆಯಲ್ಲಿ ಈ ಅಭ್ಯಾಸ ಅತ್ಯಂತ ಕೆಟ್ಟದ್ದು. ಇದರ ಬದಲು ಪ್ರತಿದಿನ ಗ್ರೀನ್ ಟೀ ಸೇವನೆ ಒಳ್ಳೆಯದು. ಖಾಲಿ ಹೊಟ್ಟೆಯಲ್ಲಿ ಚಹಾ ಕುಡಿಯಿದಿದ್ದರೇ

ಯಾವಾಗ ಟೀ ಕುಡಿಯಬೇಕು ಎಂಬ ಪ್ರಶ್ನೆಗೆ ತಜ್ಞರ ಉತ್ತರ ಉಪಹಾರ ಸೇವನೆ ನಂತರ ಟೀ ಸೇವನೆ ಒಳ್ಳೆಯದು.

ಖಾಲಿ ಹೊಟ್ಟೆಯಲ್ಲಿ ಟೀ ಸೇವಿಸಿದರೆ ಅದರಲ್ಲಿ ರಾಸಾಯನಿಕ ಅಂಶ ಹೊಟ್ಟೆ ಮತ್ತು ಕರುಳಗಳ ಒಳಭಾಗದ ಪದರವನ್ನು ಘಾಸಿಗೊಳಿಸುತ್ತದೆ. ಹಾಗಾಗಿ ಖಾಲಿ ಹೊಟ್ಟೆಯಲ್ಲಿ ಟೀ ಸೇವನೆ ಬೇಡ ಎಂಬುದು ತಜ್ಞರ ಸಲಹೆ.

ಸಾಮಾನ್ಯವಾಗಿ ಗ್ರಾಮೀಣ ಭಾಗದಲ್ಲಿ ಟೀ ಸೇವನೆ ಮಾಡುವಾಗ ಬಿಸ್ಕತ್ ತಿನ್ನುತ್ತಾರೆ. ಇದು ಒಳ್ಳೆಯದು. ಬಿಸ್ಕತ್‌ನ ಹಿಟ್ಟು ಚಹಾದಲ್ಲಿರುವ ಆಮ್ಲೀಯ ಅಂಶಗಳನ್ನು ಹೀರಿಕೊಳ್ಳುತ್ತದೆ. ಹಾಗಾಗಿ ಹೊಟ್ಟೆ ಮತ್ತು ಕರುಳಿಗೆ ತೊಂದರೆಯಾಗುವುದಿಲ್ಲ.

ಖಾಲಿ ಹೊಟ್ಟೆಯಲ್ಲಿ ಚಹಾ ಸೇವಿಸಿದರೆ ಸುಸ್ತಾದ ಭಾವನೆ, ಹೊಟ್ಟೆಯುಬ್ಬರ ಆಗಿ ಜೀರ್ಣರಸಗಳು ಪ್ರಭಾವ ಕಳೆದುಕೊಳ್ಳುತ್ತದೆ. ಹೆಚ್ಚು ಟೀ ಸೇವನೆ ಕೂಡ ಒಳ್ಳೆಯದಲ್ಲ, ಕಾರಣ ಭಾರತೀಯರು ಹಾಲು ಬೆರೆಸಿದ ಟೀ ಹೆಚ್ಚಾಗಿ ಕುಡಿಯುವುದರಿಂದ ಅನಗತ್ಯ ಕೊಬ್ಬು, ಆಮ್ಲಿಯತೆ ಮತ್ತು ಟೆನ್ನಿಟಸ್–ಅಥವಾ ಕಿವಿಗಳಲ್ಲಿ ಗುಂಯ್‌ಗೂಡುವ ತೊಂದರೆ ತಂದಿಡಬಹುದು. ಹಾಗಾಗಿ ದಿನಕ್ಕೂ ಮೂರು ಕಪ್ ಚಹಾ ಕುಡಿಯುವುದು ಒಳ್ಳೆಯದು. ಅದಕ್ಕಿಂತ ಹೆಚ್ಚು ಚಹಾ ಸೇವನೆ ಬೇಡ.


## ನಿಮ್ಮಗೆಲ್ಲಾ ಸಂತಸ ಸುದ್ಧಿ

# VOICE OF GOD
(ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.


**ಆಶ್ರಮದ ಅವಶ್ಯಕತೆಗಳು**

1. ವಾಷಿಂಗ್ ಮಿಷನ್ (50 / 100ಕೆ.ಜಿ.).
2. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0091 9902334941, 0091 8202002781, 0091 9964070654**

ಯೆಹೋವನು ಆನಂದಿಸುವದು ತನ್ನ ಕೃಪೆಯನ್ನು ನಿರೀಕ್ಷಿಸುವ ಭಕ್ತರಲ್ಲೇ
(ಕೀರ್ತ. 147:11).

# ಶ್ರೀ ಪೌಲನ ಸೆರೆಮನೆಯ ಪತ್ರಿಕೆಗಳು

ಅಪೋಸ್ತಲನಾದ ಪೌಲನು ಬರೆದ 14 ಪತ್ರಿಕೆಗಳಲ್ಲಿ ಎಫೆಸ, ಕೊಲೊಸ್ಸೆ, ಫಿಲೆಮೋನ ಮತ್ತು ಫಿಲಿಪ್ಪಿ ಎಂಬ ಈ ಪತ್ರಿಕೆಗಳು "ಸೆರೆಮನೆಯ ಪತ್ರಿಕೆಗಳು" ಎಂದು ಕರೆಯಲ್ಪಟ್ಟಿವೆ. ಯಾಕೆಂದರೆ ಪೌಲನು ಇವುಗಳನ್ನು ರೋಮಪುರದಲ್ಲಿ ಸೆರೆಯಲ್ಲಿದ್ದಾಗ ಬರೆದವುಗಳೆಂದು ಆಧಾರಗಳಿವೆ. ಈ ಪತ್ರಿಕೆಗಳು ಬರೆಯುವ ಕಾಲದಲ್ಲಿ ಪೌಲನು ಕ್ರಿಸ್ತ ಯೇಸುವಿನ ನಿಮಿತ್ತ ಸೆರೆಯವನಾಗಿದ್ದನು. ಈ ನಾಲ್ಕು ಪತ್ರಿಕೆಗಳಲ್ಲಿಯೂ ಇದರ ಕುರಿತು ಹೇಳಿರುತ್ತದೆ (ಎಫೆ. 3:1, 4:1, 6:20, ಕೊಲೊ. 4:3, 4:18, ಫಿಲೊ. 10,13,23 ಫಿಲಿ. 1:7, 13–17). ತಿಮೊಥಿಯನಿಗೆ ಬರೆದ 2ನೇ ಪತ್ರಿಕೆಯನ್ನು ಪೌಲನು ಸೆರೆಮನೆಯಲ್ಲಿದ್ದಾಗ ಬರೆದಾಗ್ಯೂ ಸೆರೆಮನೆಯ ಪತ್ರಿಕೆಗಳ ಸರಣಿಯಲ್ಲಿ ಅದನ್ನು ಸೇರಿಸಲಿಲ್ಲ. ಕಾರಣವೇನೆಂದರೆ, ತಿಮೊಥಿಯನಿಗೆ ಪತ್ರಿಕೆಯನ್ನು ಬರೆಯುವಾಗ ಪೌಲನ ಸೆರೆಮನೆಯ ಅನುಭವಗಳು ಮತ್ತು ಈ ನಾಲ್ಕು ಪತ್ರಿಕೆಗಳನ್ನು ಬರೆಯುವಾಗ ಉಂಟಾದ ಅನುಭವಗಳು ಭಿನ್ನವಾಗಿವೆ. ಮಾತ್ರವಲ್ಲದೆ ಪತ್ರಿಕೆಗಳಲ್ಲಿನ ವಿಷಯಗಳು ಸಹ ಭಿನ್ನವಾಗಿವೆ. ಸೆರೆಮನೆಯ ಪತ್ರಿಕೆಗಳಲ್ಲಿ ಫಿಲೆಮೋನನಿಗೆ ಬರೆದ ಪತ್ರಿಕೆಯ ಹೊರತು ಎಲ್ಲಾ ಪತ್ರಿಕೆಗಳಲ್ಲಿಯೂ ಕ್ರಿಸ್ತನ ವ್ಯಕ್ತಿತ್ವಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿರುತ್ತದೆ. ಪತ್ರಿಕೆಗಳನ್ನು ಕಲಿಯುವಾಗ ಎರಡು ಮುಖ್ಯ ಸಮಸ್ಯೆಗಳಿವೆ. (1) ಈ ಪತ್ರಿಕೆಗಳು ಬರೆಯಲ್ಪಟ್ಟ ಸ್ಥಳ ಮತ್ತು ಕಾಲ ಯಾವುದು? (2) ಈ ಪತ್ರಿಕೆಗಳ ಸಾರಾಂಶವೇನು?

ಅ.ಕೃ. 28:30–31 ರಲ್ಲಿ ಉಲ್ಲೇಖಿಸಿರುವ 2 ವರ್ಷಗಳ ದೀರ್ಘವಾದ ರೋಮಾಪುರದ ಸೆರೆಮನೆಯ ವಾಸದ ಕಾಲದಲ್ಲಿ ಪೌಲನು ಈ ಪತ್ರಿಕೆಗಳನ್ನು ಬರೆದಿದ್ದಾನೆಂದು ಪರಂಪರಾನುಗತವಾಗಿ ನಂಬಲಾಗಿದೆ. ಬರೆದ ಕಾಲದ ಕುರಿತು ಭಿನ್ನಾಭಿಪ್ರಾಯಗಳು ವೇದಪಂಡಿತರಲ್ಲಿ ಇರುವುದಾಗಿಯೂ ತಿಳಿದು ಬರುತ್ತದೆ. ಡಾ॥ ಶಾನ್ ಮತ್ತು ಡಾ॥ ಲಾನ್‌ಸ್ಕಿ ಇವರ ಪ್ರಕಾರ ಎ.ಡಿ. 61–63ರ ಕಾಲಾವಧಿಯಲ್ಲಿ ಈ ಪತ್ರಿಕೆಗಳು ಬರೆಯಲ್ಪಟ್ಟಿವೆ ಎಂದು ಹೇಳಿರುತ್ತಾರೆ.

ಈ ಪತ್ರಿಕೆಗಳು ಬರೆಯಲ್ಪಟ್ಟ ಸ್ಥಳದ ಕುರಿತು ಇತ್ತೀಚೆಗೆ ಕೆಲವು ಹೊಸ ಅಭಿಪ್ರಾಯಗಳು ರೂಪುಗೊಂಡಿವೆ. ಅದರ ಪ್ರಕಾರ ಈ ಪತ್ರಿಕೆಗಳು ರೋಮಾಪುರದಲ್ಲಿ ಬರೆಯಲ್ಪಡದೆ ಕೈಸರ್ಯ ಅಥವಾ ಎಫೆಸದಲ್ಲಿ ಬರೆದಿರಬಹುದೆಂದು ಕೆಲವು ವೇದಪಂಡಿತರು ಹೇಳಿದಾಗ್ಯೂ ಇದನ್ನು ಸಮರ್ಥಿಸಲು ಸಾಕಷ್ಟು ಆಧಾರಗಳು ಇರುವುದಿಲ್ಲ. ಆದರೆ ಈ ಪತ್ರಿಕೆಗಳು ಸೆರೆಮನೆಯಲ್ಲಿದ್ದುಕೊಂಡು ಬರೆದಿರುವುದಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈ ಪತ್ರಿಕೆಗಳಲ್ಲಿ ಎಫೆಸ, ಕೊಲೊಸ್ಸೆ ಮತ್ತು ಫಿಲೆಮೋನೆಂಬ ಈ ಪತ್ರಿಕೆಗಳು ಒಂದು ಭಾಗವಾಗಿ ಇದ್ದಿರಬಹುದು. ಇದರಲ್ಲಿ ಬರೆದಿರುವ ವಿಷಯಗಳ ಹೊಂದಾಣಿಕೆಗಳು ಈ ಅಭಿಪ್ರಾಯವನ್ನು ದೃಢಪಡಿಸುತ್ತವೆ. ಈ ಮೂರು ಪತ್ರಿಕೆಗಳನ್ನು ಪೌಲನು ಒಟ್ಟಿಗೆ ಕೊಟ್ಟು ಕಳುಹಿಸಿರುವುದಾಗಿ ನೋಡಬಹುದಾಗಿದೆ (ಎಫೆ. 6:21–22, ಕೊಲೊ. 4:7–9, ಫಿಲೆ. 10:12). ಆದರೆ ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಗೆ ಇಂತಹ ಹೊಂದಾಣಿಕೆಯು ಕಾಣುವುದಿಲ್ಲ. ಆದುದರಿಂದ ಫಿಲಿಪ್ಪಿ ಪತ್ರಿಕೆಯನ್ನು ಉಳಿದ ಮೂರು ಪತ್ರಿಕೆಗಳು ಬರೆದ ನಂತರ ಬರೆದಿರಬಹುದು.

ಸೆರೆಮನೆಯ ಪತ್ರಿಕೆಗಳು ಬರೆದಿರುವ ಸ್ಥಳಗಳ ಹಿನ್ನಲೆಯಲ್ಲಿ ಕೈಸರ್ಯ, ಎಫೆಸ ಮತ್ತು ರೋಮಾಪುರ ಎಂಬ ಮೂರು ಸ್ಥಳಗಳನ್ನು ಕುರಿತು ಹೇಳುವವರಿದ್ದಾಗ್ಯೂ ರೋಮಾಪುರದಲ್ಲಿ ಪೌಲನು ಸೆರೆಯಲ್ಲಿದ್ದಾಗ ಈ ಪತ್ರಿಕೆಗಳನ್ನು ಬರೆದಿದ್ದಾನೆಂದು ಹುದುವಾಗಿ ಅಂಗೀಕರಿಸಲಾಗಿದೆ. ಕೈಸರ್ಯದಲ್ಲಿಯೂ, ಎಫೆಸದಲ್ಲಿಯೂ ಪೌಲನಿಗೆ ಹಿಂಸೆಗಳು ಮತ್ತು ಸಾಯುವಷ್ಟು ಕ್ರೂರ ಯಾತನೆಗಳು ಅನುಭವಿಸಬೇಕಾದ ಸಂದರ್ಭಗಳು ಇದ್ದಾಗ್ಯೂ ರೋಮಾಪುರದ ಸೆರೆಮನೆಯಲ್ಲಿ ಪೌಲನಿಗೆ ದೊರಕಿದಷ್ಟು ಸ್ವಾತಂತ್ರ್ಯ ಹಾಗೂ ಅನುಕೂಲತೆಗಳು ಬೇರೆ ಸ್ಥಳಗಳಲ್ಲಿನ ಸೆರೆಮನೆಗಳಲ್ಲಿ ದೊರೆತಿರುವುದಾಗಿ ಮಾಹಿತಿಗಳಿಲ್ಲ.

ಶ್ರೀ ಪೌಲನು ರೋಮಾಪುರದಲ್ಲಿ ಸೆರೆಯವನಾಗಿದ್ದಾಗ 2 ವರ್ಷಗಳ ಕಾಲ ಒಂದು ಬಾಡಿಗೆ ಮನೆಯಲ್ಲಿ ಇದ್ದುಕೊಂಡು ತನ್ನ ಬಳಿಗೆ ಬರುವವರನ್ನು ಸೇರಿಸಿಕೊಂಡು ಸುವಾರ್ತೆಯನ್ನು ಯಾವ ಆತಂಕವಿಲ್ಲದೆ ಸಾರುತ್ತಿದ್ದನೆಂದು ಬರೆಯಲಾಗಿದೆ (ಅ.ಕೃ. 28:30–31). ಮತ್ತು ಚಕ್ರವರ್ತಿಯ ಅರಮನೆಯಲ್ಲಿದ್ದವರು (ಫಿಲಿ. 4:22) ಎಂಬ ಪ್ರಸ್ತಾಪನೆಯು ಪೌಲನು ರೋಮಾಪುರದಲ್ಲಿ ಸೆರೆಯವನಾಗಿದ್ದಾಗ ಈ ಪತ್ರಿಕೆಗಳನ್ನು ಬರೆದಿದ್ದಾನೆಂದು ಮತ್ತಷ್ಟು ದೃಢೀಕರಿಸುತ್ತದೆ. ಇವುಗಳನ್ನು ಪರಿಶೀಲಿಸುವಾಗ ಈ ಪತ್ರಿಕೆಗಳನ್ನು ರೋಮಾಪುರದ ಸೆರೆಮನೆಯಲ್ಲಿದ್ದಾಗ ಕ್ರಿ.ಶ. 62ರಲ್ಲಿ ಬರೆಯಲ್ಪಟ್ಟಿತೆಂದು ತಿಳಿದು ಬರುತ್ತದೆ. ಆ ಕಾಲದ ಜಗತ್ತಿನ ಮುಖ್ಯ ನಗರಗಳಲ್ಲಿ ಒಂದಾಗಿದ್ದ ರೋಮಾಪುರದ ಸೆರೆಮನೆಯಲ್ಲಿದ್ದ ಒಬ್ಬ ಖೈದಿಯ ಲೇಖನಿಯಿಂದ ಲಿಖಿತವಾದ ಈ ಪತ್ರಿಕೆಗಳು ನಮ್ಮ ಹಸ್ತಗಳಲ್ಲಿ ದೊರಕಿರುವುದು ದೇವರ ಮಹಾಕೃಪೆಯಾಗಿದೆ.

ಯೆರೂಸಲೇಮೇ, ಯೆಹೋವನನ್ನು ಕೀರ್ತಿಸು; ಚೀಯೋನೇ, ನಿನ್ನ ದೇವರನ್ನು ಸ್ತುತಿಸು (ಕೀರ್ತ. 147:12).

## ಎಫೆಸ ಪತ್ರಿಕೆ

ಎಫೆಸದವರಿಗೆ ಬರೆದ ಪತ್ರಿಕೆಯೆಂದು ಇದರ ಶಿರೋ ಬರಹದಲ್ಲಿ ಇದ್ದಾಗ್ಯೂ ಈ ಪತ್ರಿಕೆಯನ್ನು ಎಫೆಸದಲ್ಲಿದ್ದ ವಿಶ್ವಾಸಿಗಳಿಗೆ ಮಾತ್ರ ಬರೆದದ್ದಲ್ಲ. ಏಷ್ಯ ಮೈನರ್‌ನಲ್ಲಿದ್ದ ಎಲ್ಲಾ ಪ್ರಾದೇಶಿಕ ಸಭೆಗಳಿಗಾಗಿ ಪೌಲನು ಬರೆದಿರುವ ಈ ಪತ್ರಿಕೆಯು ಒಂದು ಸುತ್ತೋಲೆಯಾಗಿದೆ ಎಂದು ಕೆಲವು ಸತ್ಯವೇದ ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ. ಇದು ಸತ್ಯವೇದದ 49ನೇ ಪುಸ್ತಕ ಹಾಗೂ ಈ ಪತ್ರಿಕೆಯಲ್ಲಿ 6 ಅಧ್ಯಾಯಗಳು ಮತ್ತು 155 ವಾಕ್ಯಗಳನ್ನೊಳಗೊಂಡಿವೆ. ಈ ಪತ್ರಿಕೆಯನ್ನು ಅಧ್ಯಯನ ಮಾಡುವ ಮೊದಲು ಎಫೆಸ ಪಟ್ಟಣ ಹಾಗೂ ಅಲ್ಲಿಯ ಸುವಾರ್ತೆಯ ಪ್ರವೇಶನವನ್ನು ಕುರಿತು ಕಲಿಯುವುದು ಅವಶ್ಯವಾಗಿದೆ.

**ಎಫೆಸ ಪಟ್ಟಣ :–** ಎಫೆಸ ಪತ್ರಿಕೆಯನ್ನು ಕಲಿಯಲು ಎಫೆಸ ಪಟ್ಟಣದ ಕುರಿತು ಮತ್ತು ಅಲ್ಲಿಯ ಜನಜೀವನದ ಹಾಗೂ ಸಂಸ್ಕೃತಿಗಳ ಬಗ್ಗೆ ತಿಳಿದಿರಬೇಕಾಗಿದ್ದು ಅವಶ್ಯ. ಆ ಕಾಲದಲ್ಲಿ ಇಡೀ ಜಗತ್ತಿನಲ್ಲಿ ಕೀರ್ತಿ ಹೊಂದಿದ ಐದು ಮುಖ್ಯ ಪಟ್ಟಣಗಳಲ್ಲಿ ಎಫೆಸ ಪಟ್ಟಣವು ಒಂದಾಗಿತ್ತು. ಇತರ ಪಟ್ಟಣಗಳು ಯಾವುವೆಂದರೆ, 1. ರೋಮಾಪುರ, 2. ಯೆರುಸಲೇಮ್, 3. ಐಗುಪ್ತದ ಅಲೆಕ್ಸಾಂದ್ರಿಯ 4. ಸಿರಿಯದ ಅಂತಿಯೋಕ್ಯ ಎಂಬುವುಗಳು.

ಎಫೆಸ ಪಟ್ಟಣವು ರೋಮನ್ ಸಾಮ್ರಾಜ್ಯಕ್ಕೆ ಸೇರಿದ ಆಸ್ಯ ಸಂಸ್ಥಾನದ ಒಂದು ಪ್ರಮುಖ ಪಟ್ಟಣವಾಗಿತ್ತು. ಅಥೇನ ಹಾಗೂ ಇತರ ಸ್ಥಳಗಳಿಂದ ಬಂದು ನೆಲೆಸಿದ ಗ್ರೀಕರ ಒಂದು ಪ್ರವಾಸ ಸ್ಥಳವೂ ಆಗಿತ್ತು. ಸಮುದ್ರದಿಂದ ಸುಮಾರು 3 ಮೈಲು ದೂರದಲ್ಲಿ 'ಕೆಸ್ಟ್ರರ್' ಎಂಬ ನದಿಯ ದಡದಲ್ಲಿದ್ದ ಈ ಪಟ್ಟಣವು ಫಲವತ್ತಾದ ಒಂದು ಬಂದರಾಗಿತ್ತು. ಇಲ್ಲಿಂದ ಆಸ್ಯ ಸಂಸ್ಥಾನದ ಇತರ ಸ್ಥಳಗಳಿಗೆ ಹೆದ್ದಾರಿಗಳು ಇದ್ದುದರಿಂದ ಗ್ರೀಕ್, ಇತಾಲ್ಯ ಮುಂತಾದ ಪ್ರಾಂತ್ಯಗಳಿಂದ ವರ್ತಕರು ಹಾಗೂ ಪ್ರವಾಸಿಗಳು ಈ ಪಟ್ಟಣದೊಂದಿಗೆ ಸಂಪರ್ಕವನ್ನು ಬೆಳೆಸಿದ್ದರು.

ಶ್ರೀ ಪೌಲನ ಕಾಲದಲ್ಲಿ ಸುಮಾರು 3 ಲಕ್ಷ ಜನರು ಈ ಪಟ್ಟಣದಲ್ಲಿ ವಾಸವಿದ್ದರೆಂದು ತಿಳಿದು ಬರುತ್ತದೆ. ಗ್ರೀಕ್ ಸಂಸ್ಕೃತಿ ರೋಮನ್ ಆಡಳಿತ ಹಾಗೂ ವಾಣಿಜ್ಯ ಪ್ರಭಾವ ಇವುಗಳೆಲ್ಲವೂ ಈ ಪಟ್ಟಣವು ಕೀರ್ತಿ ಹೊಂದಲು ಕಾರಣವಾಯಿತು. ಭೂಗೋಳ ನಕ್ಷೆಯ ಪ್ರಕಾರ ಇದು ಏಷ್ಯಾ ಮತ್ತು ಯುರೋಪ್ ಖಂಡಗಳು ಕೂಡುವ ಸಂಗಮ ಸ್ಥಳವಾಗಿತ್ತು. ಇಲ್ಲಿ ವಿಶಾಲವಾದ ವಾಣಿಜ್ಯ ಕೇಂದ್ರಗಳಿದ್ದುದರಿಂದ ಇತರ ಸ್ಥಳಗಳಿಂದ ವರ್ತಕರು ಈ ಪಟ್ಟಣಕ್ಕೆ ಬಂದು ಹೋಗುವುದು ವಾಡಿಕೆಯಾಗಿತ್ತು.

ಇದಲ್ಲದೆ ಪುರಾತನ ಲೋಕದ 7 ಅದ್ಭುತಗಳಲ್ಲಿ ಒಂದಾಗಿದ್ದ ಅರ್ತೆಮಾದೇವಿಯ ದೇವಸ್ಥಾನವು ಎಫೆಸ ಪಟ್ಟಣದ ವಿಸ್ತಾರವಾದ ಒಂದು ಗುಡ್ಡದಲ್ಲಿ ಕಟ್ಟಲ್ಪಟ್ಟಿತ್ತು. ಈ ದೇವಿಯ ವಿಗ್ರಹವನ್ನು ಸುಮಾರು 200 ವರ್ಷಗಳಲ್ಲಿ ಅಮೃತ ಶಿಲೆಗಳಿಂದ ನಿರ್ಮಿಸಲಾಗಿತ್ತು. ಈ ದೇವಸ್ಥಾನವು 342 ಅಡಿ ಉದ್ದವೂ, 164 ಅಡಿ ಅಗಲವೂ, 56 ಅಡಿ ಎತ್ತರವೂ ಇತ್ತು. ಲ್ಯಾಟಿನ್ ಮತ್ತು ಆಂಗ್ಲಭಾಷೆಯಲ್ಲಿ 'ಡಯಾನ' ಎಂದು ಕರೆಯುತ್ತಿದ್ದ ಈ ದೇವಿಯನ್ನು ಎಫೆಸದ ಜನರು ಭಯ ಭಕ್ತಿಯಿಂದ ಆರಾಧಿಸುತ್ತಿದ್ದರು. ಅನೇಕ ಸ್ಥಾನಗಳನ್ನು ಹೊಂದಿದ ಈ ದೇವಿಯ ಮೂರ್ತಿಯು ಆಕಾಶದಿಂದ ಬಿದ್ದಿತೆಂದು ಅವರು ನಂಬುತ್ತಿದ್ದರು (ಅ.ಕೃ. 19:35). ಆದುದರಿಂದ ಎಫೆಸ ಪಟ್ಟಣದವರು ಈ ದೇವಸ್ಥಾನದ ಪಾಲಕರಾಗಿದ್ದರೆಂಬ ವದಂತಿ ಇತ್ತು.

'ಸಮಸ್ತವನ್ನೂ, ಸರ್ವರನ್ನೂ, ಪೋಷಿಸುವವಳು' ಎಂಬ ವಿಶೇಷ ಹೆಸರನ್ನು ಹೊಂದಿದ ಅರ್ತೆಮಾದೇವಿಯ ವರದಾನದಿಂದ ಐಶ್ವರ್ಯ ಹಾಗೂ ಸಂತಾನ ಲಾಭವನ್ನು ಹೊಂದಬಹುದೆಂಬ ನಂಬಿಕೆಯಿಂದ ಈ ದೇವಿಯ ಪ್ರತಿಮೆಗೆ ಪೂಜೆ ಪುರಸ್ಕಾರಗಳನ್ನು ಸಲ್ಲಿಸಲು ಇತರ ಸ್ಥಳಗಳಿಂದಲೂ, ಭಕ್ತಾದಿಗಳು ಬರುತ್ತಿದ್ದರು. ಇದಲ್ಲದೆ ಅನೇಕ ದೇವದಾಸಿಯರು ಈ ಮಹಾದೇವಿಯನ್ನು ಮೆಚ್ಚಿಸಲು ಈ ದೇವಸ್ಥಾನದ ಸುತ್ತಲೂ ವಾಸಮಾಡುತ್ತಾ ಹೀನವಾದ ಕೆಲಸಗಳಲ್ಲಿ ನಿರತರಾಗಿದ್ದರು. ಅರ್ತೆಮಾ ಮಹಾದೇವಿಯನ್ನು ಆರಾಧಿಸಲು ಅನೇಕ ಐಶ್ವರ್ಯವಂತರು ಸಹ ಬರುತ್ತಿದ್ದುದರಿಂದ ಈ ಪಟ್ಟಣದಲ್ಲಿದ್ದ ಅಕ್ಕಸಾಲಿಗರು ಈ ದೇವಿಯ ರೂಪವನ್ನು ವಿವಿಧ ರೀತಿಯಲ್ಲಿ ನಿರ್ಮಿಸಿ ಅದರಿಂದ ತುಂಬಾ ಹಣವನ್ನು ಗಳಿಸುತ್ತಿದ್ದರು (ಅ.ಕೃ. 19:23–24).

ಈ ಪಟ್ಟಣದಲ್ಲಿ ಸುಮಾರು 24,000 ಜನರು ಕುಳಿತುಕೊಳ್ಳುವಷ್ಟು ವಿಶಾಲವಾದ ಒಂದು ನಾಟಕಶಾಲೆ ಮತ್ತು ಅದಕ್ಕೆ ಹೊಂದಿಕೊಂಡು ಒಂದು ರಂಗಸ್ಥಳವು ಇತ್ತು. ಈ ರಂಗಸ್ಥಳದಲ್ಲಿ ನಾನಾ ತರಹದ ಕಾಯಕ ವಿನೋದಗಳು, ಸ್ಪರ್ಧೆಗಳು ಮತ್ತು ಕ್ರೂರ ಮೃಗಗಳೊಂದಿಗೆ ಮನುಷ್ಯರು ಹೆಣಗಾಡುವ ಹೋರಾಟವು ನಡೆಯುತ್ತಿತ್ತು. "ನಾನು ಎಫೆಸದಲ್ಲಿ ಮೃಗಗಳೊಂದಿಗೆ ಯುದ್ಧ ಮಾಡಿದೆನೆಂದು" ಪೌಲನು ಹೇಳಿರುವ ರಂಗಸ್ಥಳವು ಇದಾಗಿರಬಹುದು ಮತ್ತು ಇವುಗಳ ಸೂಚನೆಗಳು ಪೌಲನು ಎಫೆಸದಿಂದ ಕೊರಿಂಥದವರಿಗೆ ಬರೆದ ಪತ್ರಿಕೆಗಳಲ್ಲಿಯೂ ಕಾಣಬಹುದು (1 ಕೊರಿ. 4:9, 9:24–25, 15:32).

ಮುಂದುವರಿಯುವದು......

ಸಂಗ್ರಹ

ಆತನು ನಿನ್ನ ಹೆಬ್ಬಾಗಲುಗಳ ಅಗುಳಿಗಳನ್ನು ಬಲಪಡಿಸಿದ್ದಾನೆ; ನಿನ್ನ ಮಕ್ಕಳನ್ನು ಆಶೀರ್ವದಿಸಿದ್ದಾನೆ (ಕೀರ್ತ. 147:13).

# ನೀತಿವಂತನ ಆಶೀರ್ವಾದಗಳು

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

"ಇವೆಲ್ಲಾ ರಾಜನಾದ ನೆಬೂಕದ್ನೆಚ್ಚರನ ಅನುಭವಕ್ಕೆ ಬಂತು. ಹನ್ನೆರಡು ತಿಂಗಳು ಕಳೆದ ನಂತರ ಅವನು ಬಾಬೆಲಿನ ಅರಮನೆಯ ಮೇಲೆ ತಿರುಗಾಡುತ್ತಾ ನನ್ನ ಮಹಿಮೆಯು ಪ್ರಸಿದ್ಧಿಗೆ ಬರುವಂತೆ ನನ್ನ ಸಾಮರ್ಥ್ಯ ಬಲದಿಂದ ರಾಜ ನಿವಾಸಕ್ಕಾಗಿ ನಾನು ಕಟ್ಟಿಸಿಕೊಂಡಿರುವುದು ಇಗೋ, ಈ ಮಹಾಪಟ್ಟಣವಾದ ಈ ಬಾಬೆಲ್ ಎಂದು ಕೊಚ್ಚಿಕೊಂಡನು. ಈ ಮಾತು ರಾಜನ ಬಾಯಿಂದ ಹೊರಡುತ್ತಿರುವಾಗ ಅರಸನಾದ ನೆಬೂಕದ್ನೆಚ್ಚರನೇ, ನಿನಗಾದ ದೈವೋಕ್ತಿಯನ್ನು ಕೇಳು; ರಾಜ್ಯವು ನಿನ್ನಿಂದ ತೊಲಗಿದೆ, ನೀನು ಮನುಷ್ಯರೊಳಗಿಂದ ತಳ್ಳಲ್ಪಟ್ಟು ಕಾಡು ಮೃಗಗಳೊಂದಿಗೆ ವಾಸಿಸುವಿ, ದನಗಳಂತೆ ಹುಲ್ಲು ಮೇಯುವುದೇ ನಿನಗೆ ಗತಿಯಾಗುವುದು; ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದನ್ನು ತನಗೆ ಬೇಕಾದವರಿಗೆ ಒಪ್ಪಿಸುತ್ತಾನೆ ಎಂಬುದು ನಿನ್ನ ತಿಳುವಳಿಕೆಗೆ ಬರುವುದರೊಳಗೆ ಏಳು ವರುಷ ನಿನಗೆ ಕಳೆಯುವುದು ಎಂದು ಆಕಾಶವಾಣಿಯಾಯಿತು. ಈ ನುಡಿಯು ನೆಬೂಕದ್ನೆಚ್ಚರನಲ್ಲಿ ತಕ್ಷಣವೇ ನೆರವೇರಿತು; ಅವನು ಮನುಷ್ಯರೊಳಗಿಂದ ತಳ್ಳಲ್ಪಟ್ಟು ದನಗಳಂತೆ ಹುಲ್ಲು ಮೇಯುತ್ತಾ ಆಕಾಶದ ಇಬ್ಬನಿಯಿಂದ ನೆನೆಯುತ್ತಾ ಇದ್ದನು. ಅವನ ಕೂದಲು ಹದ್ದುಗಳ ಗರಿಯಂತೆಯೂ ಅವನ ಉಗುರು ಹಕ್ಕಿಗಳ ಉಗುರಿನ ಹಾಗೂ ಬೆಳೆದವು" (ದಾನಿ. 4:28–33).

ಒಬ್ಬ ರಾಜನ ಉಬ್ಬುವಿಕೆಗೆ ಸಿಕ್ಕಿದ ಪ್ರತಿಫಲವನ್ನು ಮೇಲಿನ ವಚನಗಳಲ್ಲಿ ನಾವು ಕಾಣುತ್ತೇವೆ. ಅವನು ತನ್ನ ಪದವಿ ಮತ್ತು ರಾಜ್ಯಾಭಿವೃದ್ಧಿಯ ನಿಮಿತ್ತವಾಗಿ ದೇವರಿಗೆ ಕೊಡಬೇಕಾದ ಮಾನವನ್ನು ಕೊಡದೇ ಹೋದಾಗ ಒಂದು ಮುರಿಯುವಿಕೆ ಅವನ ಜೀವಿತದಲ್ಲಿ ಬಂತು. ಪ್ರಿಯರೇ, ಕೆಲವೊಮ್ಮೆ ನಮ್ಮ ಜೀವಿತದಲ್ಲಿ ಕೂಡ ಇದು ಅಗತ್ಯ. 2 ಕೊರಿ. 12:7–9ರಲ್ಲಿ ಪೌಲನಿಗೆ ದೇವರು ಕೊಟ್ಟಂತಹ ಅಪಾರವಾದ ಜ್ಞಾನ, ಪ್ರಕಟನೆಗಳ ನಿಮಿತ್ತವಾಗಿ ಅವನು ಉಬ್ಬಿ ಬಿದ್ದು ಹೋಗದೆ ಇರುವುದಕ್ಕಾಗಿ ಅವನ ಶರೀರದಲ್ಲಿ ಒಂದು ನೋವು ಕೊಡಲ್ಪಟ್ಟಿತು. ಅವನು ದೇವರನ್ನು ನೋಡಿ 3 ಸಲ ಪ್ರಾರ್ಥಿಸಿದನು. ನೋವನ್ನು ತೆಗೆ ಎಂದು ದೇವರು ನನ್ನ ಕೃಪೆಯೇ ನಿನಗೆ ಸಾಕು ನಿನ್ನ ಬಲಹೀನತೆಯಲ್ಲಿ ನನ್ನ ಬಲವು ಪೂರ್ಣ ಸಾಧಕವಾದದ್ದು ಎಂದು ಉತ್ತರಿಸಿದನು.

ಪ್ರಿಯ ಸಹೋದರ, ಸಹೋದರಿಯೇ ನಿನ್ನಲ್ಲಿ ಉಬ್ಬುವಿಕೆ ಬಂದು ನೀನು ಬೀಳುವುದಕ್ಕೆ ಮುಂಚೆ ದೇವರು ನಿನ್ನನ್ನು ಮುರಿಯುತ್ತಾನೆ. ಕಾರಣ ದೇವರು ನಿನ್ನನ್ನು ಪ್ರೀತಿಸುತ್ತಾನೆ. ಕೊನೆಗೆ ನೆಬೂಕದ್ನೆಚ್ಚರನ ಜೀವಿತದಲ್ಲಿ ಮುರಿಯುವಿಕೆಯ 7 ವರ್ಷಗಳು ಕಳೆದ ನಂತರ ಏನು ಸಂಭವಿಸಿತು ಎಂದು ನೋಡೋಣ.

"ಆ ಕಾಲವು ಕಳೆದ ಮೇಲೆ ನೆಬೂಕದ್ನೆಚ್ಚರನಾದ ನಾನು ಆಕಾಶದ ಕಡೆಗೆ ಕಣ್ಣೆತ್ತಲು ನನ್ನ ಬುದ್ಧಿಯು ಪುನಃ ನನ್ನ ಸ್ವಾಧೀನವಾಯಿತು. ಆಗ ನಾನು ಪರಾತ್ಪರನನ್ನು ಕೊಂಡಾಡಿ ಸದಾ ಜೀವಿಸುವಾತನಿಗೆ ಸ್ತುತಿಸ್ತೋತ್ರಗಳನ್ನು ಸಲ್ಲಿಸಿದೆನು; ಆತನ ಆಳಿಕೆಯು ಶಾಶ್ವತ, ಆತನ ರಾಜ್ಯವು ತಲತಲಾಂತರಕ್ಕೂ ನಿಲ್ಲುವದು; ಭೂನಿವಾಸಿಗಳೆಲ್ಲರೂ [ಆತನ ದೃಷ್ಟಿಯಲ್ಲಿ] ಏನೂ ಅಲ್ಲದಂತಿದ್ದಾರೆ, ಪರಲೋಕ ಸೈನ್ಯದವರಲ್ಲಿಯೂ ಭೂಲೋಕದವರಲ್ಲಿಯೂ ತನ್ನ ಇಚ್ಛಾನುಸಾರ ನಡೆಯುತ್ತಾನೆ; ಯಾರೂ ಆತನ ಕೈಯನ್ನು ಹಿಂದಕ್ಕೆ ತಳ್ಳಲಾರರು, ನೀನು ಏನು ಮಾಡುತ್ತೀ ಎಂದು ಯಾರೂ ಕೇಳಲಾರರು. ಅದೇ ಸಮಯದಲ್ಲಿ ನನ್ನ ಬುದ್ಧಿಯು ಪುನಃ ನನ್ನ ಸ್ವಾಧೀನವಾಯಿತು; ನನ್ನ ಪ್ರಭಾವ ವೈಭವಗಳು ನನಗೆ ಮತ್ತೆ ಲಭಿಸಿ ನನ್ನ ರಾಜ್ಯದ ಕೀರ್ತಿಯು ಪ್ರಕಾಶಿಸಿತು; ನನ್ನ ಮಂತ್ರಿಗಳೂ ಅಧಿಪತಿಗಳೂ ನನ್ನನ್ನು ಓಲೈಸಿದರು; ನನ್ನ ರಾಜ್ಯದಲ್ಲಿ ರಾಜನಾಗಿ ನೆಲೆಗೊಂಡೆನು; ನನ್ನ ಮಹಿಮೆಯು ಅತ್ಯಧಿಕವಾಯಿತು. ಈಗ ನೆಬೂಕದ್ನೆಚ್ಚರನಾದ ನಾನು ಪರಲೋಕ ರಾಜನನ್ನು ಹೊಗಳಿ ಕೊಂಡಾಡಿ ಕೀರ್ತಿಸುತ್ತೇನೆ; ಆತನ ಕಾರ್ಯಗಳೆಲ್ಲಾ ಸತ್ಯ, ಆತನ ಮಾರ್ಗಗಳೆಲ್ಲಾ ನ್ಯಾಯ; ಸೊಕ್ಕಿನಿಂದ ನಡೆಯುವವರನ್ನು ತಗ್ಗಿಸಬಲ್ಲನು" (ದಾನಿ. 4:34–37).

2) **ನಾನು ದೇವರು ಎಂಬುದಾಗಿ ಅಂದುಕೊಂಡೆನು (ಯೆಹೆ. 28:2)** : ಇಂದಿನ ಕಾಲದಲ್ಲಿ ಒಂದು ಚಿಕ್ಕ ಪದವಿ ಸಿಕ್ಕದಾಗಲೇ ಅನೇಕರು ಉಬ್ಬಿಕೊಂಡು ಬೇರೆಯವರನ್ನು ತಾತ್ಸಾರ ಮಾಡುವಂತಹ ಕಾಲ ಇದು. ಇನ್ನು ಕೆಲವರು ಪದವಿಗಳು ಸಿಕ್ಕಿದಾಗ ದೀನತೆಯಿಂದ ಬೇರೆಯವರ ಸೇವೆ ಕೂಡ ಮಾಡುತ್ತಾರೆ. ಇಂದು ಅನೇಕ ಸೇವಕರು, ಕ್ರೈಸ್ತ ವಿಶ್ವಾಸಿಗಳು ಬೀಳಲು ಇನ್ನೊಂದು ಕಾರಣ ಇದಾಗಿದೆ. ಬೇರೆ ಸೇವಕರನ್ನು, ಇತರರನ್ನು ಅನುಕರಣೆ ಮಾಡುವುದು ಮತ್ತು ಅವರ ಹಾಗೆ ಆಗಬೇಕೆನ್ನುವ ಒಂದು ಬಯಕೆ ಮತ್ತು ಹಂಬಲ ಇದಕ್ಕಾಗಿ ತಮ್ಮ ಮೇಲಿರುವ ಸೇವಕರನ್ನು ಹೇಗಾದರೂ ಸಮಸ್ಯೆಗಳಲ್ಲಿ ಸಿಕ್ಕಿಸಿ ಅಥವಾ ಅವರ ಸಭೆಯ ವಿಶ್ವಾಸಿಗಳ ಮನಸ್ಸನ್ನು ಸೇವಕರಿಗೆ ವಿರುದ್ಧವಾಗಿ ಕೆಡಿಸಿ

ಮುರಿದ ಮನಸ್ಸುಳ್ಳವರನ್ನು ವಾಸಿಮಾಡುತ್ತಾನೆ; ಅವರ ಗಾಯಗಳನ್ನು ಕಟ್ಟುತ್ತಾನೆ (ಕೀರ್ತ. 147:3).

ಅವರ ಸ್ಥಾನವನ್ನು ಪಡೆದುಕೊಳ್ಳಲು ಹಾತೊರೆಯುವಂತಹ ಎಷ್ಟೋ ಜನರನ್ನು ಇಂದಿನ ಕಾಲದಲ್ಲಿ ನಾವು ಕಾಣಬಹುದು. ದಾವೀದನಿಗೆ ಒಬ್ಬ ಮಗನಿದ್ದನು. ಅವನ ಹೆಸರು ಅಬ್ಷಾಲೋಮ ಎಂಬುದಾಗಿ. ಅವನ ಆಸೆ ಎಲ್ಲಾ ತನ್ನ ತಂದೆಯು ಸಿಂಹಾಸನದಲ್ಲಿ ಕುಳಿತುಕೊಳ್ಳುವುದು ಅದನ್ನು ಹೇಗಾದರೂ ಕಸಿದುಕೊಳ್ಳಬೇಕೆಂದು ಕಾಯುತ್ತಿದ್ದನು. ಇಂದು ಈ ರೀತಿ ದೇವ ಸೇವಕರಿಗೆ ಮೋಸ ಮಾಡಿ ತಾವೇ ಪಾಸ್ಟರ್‌ಗಳೆಂದು ಕರೆಸಿಕೊಳ್ಳುವ ಅನೇಕರನ್ನು ಇಂದಿನ ದಿನಗಳಲ್ಲಿ ಲೋಕದಲ್ಲಿ ಕಾಣಬಹುದು. ಒಂದು ಸಭೆಯಲ್ಲಿ ಒಬ್ಬ ಸೇವಕರ ಜೊತೆಯಲ್ಲಿ ಒಬ್ಬ ಸಹೋದರ ಸಹ ಸೇವಕರಾಗಿ ಸೇವೆ ಮಾಡುತ್ತಿದ್ದರು ಅನೇಕ ಸಲ ಅವರ ಬಾಯಿಂದ ಜೀವ ಹೋದರೂ ತನ್ನ ಆತ್ಮೀಕ ತಂದೆಯನ್ನು ಬಿಟ್ಟು ಹೋಗುವುದಿಲ್ಲ ತನಗೆ ದೇವರು ಒಳ್ಳೆಯ ಆತ್ಮೀಕ ತಂದೆಯನ್ನು ಕೊಟ್ಟಿದ್ದಾರೆ ಎಂದು ಸಾಕ್ಷಿ ಹೇಳುತ್ತಿದ್ದರು. ಹೀಗೆ ಒಂದಾನೊಂದು ಸಮಯದಲ್ಲಿ ಸೇವಕರನ್ನು ಬಿಟ್ಟು ಹೋಗುತ್ತೇನೆಂದು ತೀರ್ಮಾನಿಸಿದರು. ಸೇವಕರು ಅವರನ್ನು ಕರೆದು ಆಲೋಚನೆ ಹೇಳಿ ಎಷ್ಟು ಬುದ್ಧಿ ಹೇಳಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಸೇವಕರು ಅವರಿಗೆ ಕೇಳಿದರು ನೀವು ನಮ್ಮನ್ನು ಬಿಟ್ಟು ಹೋಗುತ್ತೇನೆಂದು ಹೇಳುತ್ತಿರಿ ಸಭೆಯವರ ಮುಂದೆಯೇ ಸ್ವಲ್ಪ ದಿವಸಗಳ ಹಿಂದೆ ನೀವು ಸಾಕ್ಷಿ ಕೊಟ್ಟಿದ್ದೀರಿ. ಮತ್ತೆ ನೀವು ಕಾರಣವಿಲ್ಲದೆ ಹೀಗೆ ಹೊರಟು ಹೋದರೆ ಸಭೆಯವರು ಕೇಳುತ್ತಾರಲ್ಲಾ ಅವರಿಗೆ ನೀವು ಏನು ಉತ್ತರ ಕೊಡುತ್ತೀರಿ ಎಂದು ಕೇಳಿದ್ದಕ್ಕೆ ಆ ಸಹ ಸೇವಕರು ಪಾಸ್ಟರ್ ನಾನು ಈ ಊರಿನಲ್ಲಿ ಇರುವುದಿಲ್ಲ ಬೇರೆ ಎಲ್ಲಿಯಾದರೂ ದೂರದ ಊರಿಗೆ ಹೋಗಿ ಸೇವೆ ಮಾಡುತ್ತೇನೆ ಎಂಬುದಾಗಿ ಹೇಳಿ ಅಲ್ಲಿ ನಿಲ್ಲದೇ ತಕ್ಷಣ ಹೊರಟು ಹೋದರು. ಆ ಸೇವಕರಿಗೆ ಇವೆಲ್ಲಾ ಬೆಳವಣಿಗೆಗಳಲ್ಲಿ ತುಂಬಾ ದು:ಖವಾಯಿತು. ಆ ಸಹ ಸೇವಕರಿಗಾಗಿ ಕರ್ತನ ಬಳಿ ಪ್ರಾರ್ಥಿಸುತ್ತಿದ್ದರು. ಕೆಲವೇ ಕೆಲವು ದಿವಸಗಳು ಆಗಲಿಲ್ಲ ಈ ಪಾಸ್ಟರ್‌ರವರಿಗೆ ಗೊತ್ತಾಯಿತು. ಬಿಟ್ಟು ಹೋದ ಆ ಸಹ ಸೇವಕರು ಇದೇ ಊರಿನಲ್ಲಿದ್ದಾರೆ ಮತ್ತು ಸೇವೆ ಮಾಡುತ್ತಿದ್ದಾರೆಂಬುದಾಗಿ. ಅನೇಕ ಸಲ ಜನರು ತಮ್ಮ ಮೇಲಿರುವ ದೈವೀಕ ಕರೆಯನ್ನು ದುಡುಕಿ ನಷ್ಟಪಡಿಸುವಂತದ್ದನ್ನು ನಾವು ಕಾಣಬಹುದು. ಅದಕ್ಕೆ ಒಂದು ಕಾರಣ ನಾನು ಪಾಸ್ಟರ್ ಆಗಬೇಕು. ನನ್ನನ್ನು ಜನರು ಪಾಸ್ಟರ್‌ರೇ ಎಂಬುದಾಗಿ ಕರೆಯಬೇಕು, ಗೌರವಿಸಬೇಕು ಅಥವಾ ಬೇರೆ ಬೇರೆ ದುರುದ್ದೇಶಗಳನ್ನು ಇಟ್ಟುಕೊಂಡು ಅನೇಕರು ದುಡುಕಿ ತಪ್ಪು ಹೆಜ್ಜೆ ಇಡುವ ನಿಮಿತ್ತ ಬಿದ್ದು ಹೋಗುತ್ತಾರೆ.

ದಾವೀದನ ಮಗನಾದ ಅಬ್ಷಾಲೋಮನ ಕುರಿತು ನಾವು ಕಲಿಯುವುದಾದರೆ ತಂದೆ ರಾಜನಾಗಿ ಜೀವಂತವಾಗಿ ಸಿಂಹಾಸನದಲ್ಲಿರುವಾಗಲೇ ಅವನ ಜನರನ್ನು ತನ್ನ ತಂದೆಗೆ ವಿರೋಧವಾಗಿ ನಿಲ್ಲಿಸಿ ತನ್ನ ಕಡೆಗೆ ಸೆಳೆದು ಕೊಳ್ಳುವಂತಹ ಕಪಟತನವನ್ನು ನಾವು ಕಾಣಬಹುದು. "ಸ್ವಲ್ಪ ಕಾಲವಾದನಂತರ ಅಬ್ಷಾಲೋಮನು ತನಗೋಸ್ಕರ ಒಂದು ರಥವನ್ನೂ ಕುದುರೆಗಳನ್ನೂ ತೆಗೆದುಕೊಂಡು ತನ್ನ ಮುಂದೆ ಮೈಗಾವಲಾಗಿ ಓಡುವದಕ್ಕೆ ಐವತ್ತು ಮಂದಿಯನ್ನು ನೇಮಿಸಿದನು. ಅವನು ಹೊತ್ತಾರೆಯಲ್ಲೆದ್ದು ಊರುಬಾಗಲ ಬಳಿಯಲ್ಲಿ ನಿಂತುಕೊಳ್ಳುವನು. ಯಾವನಾದರೂ ತನ್ನ ವ್ಯಾಜ್ಯತೀರಿಸಿಕೊಳ್ಳುವದಕ್ಕಾಗಿ ಅರಸನ ಬಳಿಗೆ ಹೋಗುವದನ್ನು ಅಬ್ಷಾಲೋಮನು ಕಂಡರೆ ಅಂಥವನನ್ನು ತನ್ನ ಬಳಿಗೆ ಕರೆದು ನೀನು ಯಾವ ಊರಿನವನು ಎಂದು ಕೇಳುವನು. ಅವನು ನಿನ್ನ ಸೇವಕನಾದ ನಾನು ಇಸ್ರಾಯೇಲ್ಯರ ಇಂಥ ಕುಲಕ್ಕೆ ಸೇರಿದವನು ಎಂದು ಉತ್ತರ ಕೊಡುವನು. ಆಗ ಅಬ್ಷಾಲೋಮನು ನೋಡು, ನಿನ್ನ ಕಾರ್ಯವು ಒಳ್ಳೇದೂ ನ್ಯಾಯವಾದದ್ದೂ ಆಗಿದೆ; ಆದರೆ ವ್ಯಾಜ್ಯಗಳನ್ನು ವಿಚಾರಿಸುವದಕ್ಕೆ ಅರಸನಿಂದ ಒಬ್ಬನೂ ನೇಮಕವಾಗಿಲ್ಲ. ವ್ಯಾಜ್ಯವಾಗಲಿ ಬಿನ್ನಹವಾಗಲಿ ಉಳ್ಳವರು ಬಂದು ನ್ಯಾಯವನ್ನು ಪಡಕೊಳ್ಳುವ ಹಾಗೆ ನನ್ನನ್ನೇ ದೇಶದ ನ್ಯಾಯಾಧಿಪತಿಯನ್ನಾಗಿ ನೇಮಿಸಿದ್ದರೆ ಎಷ್ಟೋ ಒಳ್ಳೇದಾಗುತ್ತಿತ್ತು ಎಂದು ಹೇಳುವನು. ಯಾವನಾದರೂ ಅವನಿಗೆ ಸಾಷ್ಟಾಂಗನಮಸ್ಕಾರ ಮಾಡುವದಕ್ಕೆ ಬಂದರೆ ಅವನು ಕೂಡಲೆ ಕೈಚಾಚಿ ಅವನನ್ನು ಹಿಡಿದು ಮುದ್ದಿಡುವನು. ಅರಸನ ಬಳಿಗೆ ವ್ಯಾಜ್ಯಕ್ಕಾಗಿ ಬರುವ ಎಲ್ಲಾ ಇಸ್ರಾಯೇಲ್ಯರಿಗೆ ಅಬ್ಷಾಲೋಮನು ಹೀಗೆಯೇ ಮಾಡಿ ಎಲ್ಲರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿಕೊಂಡನು" (2 ಸಮು 15:1–6).

ಇಲ್ಲಿ ಅಬ್ಷಾಲೋಮನು ಮೋಸದಿಂದ ಜನರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸುವಂತದ್ದನ್ನು ಕಾಣುತ್ತೇವೆ. ಇದಕ್ಕೆ ಒಂದು ಕಾರಣ ತಾನು ಕೂಡ ತನ್ನ ತಂದೆಯಾದ ದಾವೀದನಂತೆ ಆಗಬೇಕು ಎಂಬುದಾಗಿ. ಒಂದು ಕುರಿ ಹುಲಿಯಾಗಲು ಹೋಯಿತಂತೆ. ಹುಲಿಯಂತೆಯೇ ನಟನೆ ಮಾಡುವುದು, ಗರ್ಜಿಸುವುದು, ನಡೆಯುವುದು ಒಂದು ದಿನ ನಿಜವಾದ ಹುಲಿ ಬಂದು ಅದನ್ನು ತಿಂದು ಬಿಟ್ಟಿತಂತೆ.

ಇದು ಅಬ್ಷಾಲೋಮನ ಪರಿಸ್ಥಿತಿಯಾಗಿತ್ತು.

ಮುಂದುವರಿಯುವದು......

**ಪಾ॥ ಸುನಿಲ್ ಜಾನ್ ಡಿ'ಸೋಜಾ**

ಯೆಹೋವನ ಮಾರ್ಗಗಳೆಲ್ಲಾ ನೀತಿಯುಳ್ಳವುಗಳು;
ಆತನು ಎಲ್ಲಾ ಕಾರ್ಯಗಳಲ್ಲಿ ಕೃಪೆತೋರಿಸುವವನು (ಕೀರ್ತ. 145:17).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: 0091-820 2589070, 0091-820 200 2781
E-mial: dgmofficial@gmail.com

ನಿನ್ನ ಚಿತ್ತದಂತೆ ನಡಕೊಳ್ಳುವದನ್ನು ನನಗೆ ಕಲಿಸು; ನನ್ನ ದೇವರು ನೀನಲ್ಲವೋ?
ಶುಭಕಾರಿಯಾಗಿರುವ ನಿನ್ನ ಆತ್ಮನು ನನ್ನನ್ನು ಮಟ್ಟನೆಲದಲ್ಲಿ ನಡಿಸಲಿ (ಕೀರ್ತ. 143:10).

## ಮಹಿಳೆಯರ ಸ್ವರ

# ರೂತಳು

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಎಲೀಷನ ಸೇವಕನಾದ ಗೇಹಜಿ ಎಲೀಷನನ್ನು ಬಿಟ್ಟು ಬಿಟ್ಟು ಲೋಕದ ವಸ್ತುಗಳಿಗಾಗಿ ಅಂದರೆ ಹಣ ಬಟ್ಟೆ ಇವುಗಳಿಗಾಗಿ ಆಸೆ ಪಟ್ಟನು. ನಾಮಾನನ ರಥದ ಹಿಂದೆ ಓಡುತ್ತಾನೆ. ಆಗ ಎಲೀಷನ ಹೃದಯ ಗೇಹಜಿಗಾಗಿ ಪರಿತಪಿಸಿತು. ದ್ರವ್ಯ ಬಟ್ಟೆಗಳು ಎಣ್ಣೇಮರದ ತೋಪುಗಳು ದ್ರಾಕ್ಷೇ ತೋಟಗಳು ಕುರಿ ದನಗಳು ಇವುಗಳನ್ನು ಸಂಪಾದಿಸುವುದಕ್ಕೆ ಇದು ಸಮಯವೋ ಎಂದು ಎಲೀಷನು ಗೇಹಜಿಯನ್ನು ಕೇಳುತ್ತಾನೆ. ಆದರೆ ಗೇಹಜಿಯ ಮನಸ್ಸು ಕಲ್ಲಾಗಿತ್ತು. ಏನು ಪ್ರಯೋಜನ? ನಾಮಾನನ ಹಣವು ಅವನಿಗೆ ಸಂತೋಷ ಸಮಾಧಾನವನ್ನು ಕೊಡಲಿಲ್ಲ. ಬದಲಾಗಿ ನಾಮಾನನ ಕುಷ್ಠರೋಗವು ಗೇಹಜಿಗೆ ಬಂತು. ದೇವಮಗುವೇ, ಕೊರತೆಯೋ ? ಸಮೃದ್ಧಿಯೋ ಅದನ್ನು ಕರ್ತನೊಂದಿಗೆ ಅನುಭವಿಸಲು ತೀರ್ಮಾನಿಸು. ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಆತನು ಎಲ್ಲಾ ಕಾರ್ಯಗಳನ್ನೂ ಅನುಕೂಲ ಮಾಡಿಕೊಡುತ್ತಾನೆ. ಆತನು ಒಂದು ಕ್ಷಣ ಕೈಬಿಟ್ಟರೂ ಮಹಾ ಕರುಣೆಯಿಂದ ನಿನ್ನನ್ನು ಕನಿಕರಿಸುತ್ತಾನೆ, ನಿನ್ನನ್ನು ಆಶೀರ್ವದಿಸುತ್ತಾನೆ. ಆದುದರಿಂದ ಆ ಪ್ರೀತಿಯ ರಕ್ಷಕನ ಪ್ರಸನ್ನತೆಯನ್ನೂ ಸಮಾಧಾನವನ್ನೂ ಬಯಸಿ ಯಾವ ಸ್ಥಿತಿಯಲ್ಲೇ ಆಗಲಿ ಸಂತೋಷದಿಂದಿರಲು ತೀರ್ಮಾನಿಸು. ಸಾಕು ಎನ್ನುವ ದೇವ ಭಕ್ತಿಯಲ್ಲಿ ನಿನಗಿರುವುದರಲ್ಲಿ ಸಂತೃಪ್ತಿಯಿಂದಿರು. ನಿಮ್ಮ ಸಂಬಳದಲ್ಲಿ ತೃಪ್ತರಾಗಿರಿ ಎಂದು ಸಾರಿದ ಸ್ನಾನಿಕನಾದ ಯೋಹಾನನ ಪ್ರಸಂಗವನ್ನು ಕೇಳಿರಿ (ಲೂಕ. 3:14). ಸ್ವಲ್ಪದರಲ್ಲಿಯೇ ತೃಪ್ತಿಯಾಗಿ ಜೀವಿಸುವುದು ಎಷ್ಟೋ ಒಳ್ಳೆಯದು. ಅನೇಕರು ಎಷ್ಟಿದ್ದರೂ ಸಾಲದು ಎಂಬ ಅತೃಪ್ತಿಯಿಂದಲೇ ತಮ್ಮ ಜೀವನವನ್ನು ಕಳೆಯುತ್ತಾರೆ. ಕೆಲವರು ಹಣದಾಶೆಯಿಂದ ತಮ್ಮನ್ನು ತಾವೇ ಮೋಸಗೊಳಿಸಿಕೊಳ್ಳುತ್ತಾರೆ. ಹಣದಾಸೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆಯೆಂಬುದನ್ನು ಮರೆತು ಬಿಡುತ್ತಾರೆ. ಹೀಗಾಗಿ ಅನೇಕ ವೇದನೆಗಳಿಗೆ ಒಳಗಾಗುತ್ತಾರೆ. ಅನೇಕರು ಇಂಥ ಸ್ಥಿತಿಯಲ್ಲಿ ದೇವರಿಗೆ ವಿರೋಧವಾಗಿ ಗುಣುಗುಟ್ಟುತ್ತಾರೆ. ದೇವ ಸೇವಕರುಗಳ ಮೇಲೆ ತಪ್ಪು ಹೊರಿಸುತ್ತಾರೆ. ಆದರೆ ಅವರು ದೇವರ ಸನ್ನಿಧಾನದಲ್ಲಿ ಕುಳಿತು ತಮ್ಮ ಸಮಸ್ಯೆಗಳಿಗೆ ಮೂಲ ಕಾರಣವನ್ನು ಪ್ರಾರ್ಥನೆಯಿಂದ ಅರಿತುಕೊಳ್ಳುವುದಾದರೆ ಅವರ ಎಲ್ಲಾ ಸಮಸ್ಯೆಗಳಿಗೂ ಪರಿಹಾರವನ್ನು ಕಂಡುಕೊಳ್ಳುತ್ತಾರೆಂಬುದನ್ನು ಅವರು ಮರೆಯಬಾರದು. ನೊವೋಮಿಯು ನ್ಯಾಯಾಧಿಪತಿಗಳು ನ್ಯಾಯವನ್ನು ವಿಚಾರಿಸುತ್ತಿದ್ದ ಕಾಲದಲ್ಲಿ ಇಸ್ರಾಯೇಲ್ಯರ ನ್ಯಾಯವನ್ನು ವಿಚಾರಿಸಲು ಅರಸರಿರಲಿಲ್ಲ. ಅವರವರು ಸ್ವಂತ ದೃಷ್ಟಿಗೆ ಸರಿಯಾದುದ್ದನ್ನೇ ಮಾಡುತ್ತಿದ್ದರು. ನೊವೋಮಿಯು ಸಹ ಹಾಗೆಯೇ ನಡೆದುಕೊಂಡಳು. ದೇವರ ಚಿತ್ತದಂತೆ ನಡೆದುಕೊಳ್ಳಲಿಲ್ಲ. ಮನುಷ್ಯನಿಗೆ ತೋರುವ ಒಂದು ಸರಳ ಮಾರ್ಗ ಉಂಟು. ಅದು ಮರಣ ಮಾರ್ಗವೆಂದು ಸತ್ಯವೇದವು ಸ್ಪಷ್ಟವಾಗಿ ತಿಳಿಸುತ್ತದೆ. ಇದು ಎಷ್ಟು ಸತ್ಯ. ತನ್ನ ಮನಸ್ಸಿನಂತೆ ನಡೆದ ನೊವೋಮಿಯ ಕುಟುಂಬದಲ್ಲಿ ಅವಳು ಸಾಗಿದ್ದು ಮರಣ ಮಾರ್ಗದಲ್ಲಿಯೇ ತನ್ನ ಇಬ್ಬರು ಮಕ್ಕಳನ್ನು ಕಳೆದುಕೊಳ್ಳಬೇಕಾಯಿತು. ಎಲಿಮೆಲೇಕನು ತನ್ನ ಪತ್ನಿ ಇಬ್ಬರು ಮಕ್ಕಳೊಂದಿಗೆ ಮೋವಾಬ್ ದೇಶಕ್ಕೆ ಹೋದನು, ಆ ದೇಶದಲ್ಲಿ ಸಂಚರಿಸಿದನೆಂದು ಸತ್ಯವೇದವು ತಿಳಿಸುತ್ತದೆ. ಜೀವಿತ ಕಾಲವೆಲ್ಲ ಎಂದು ತಿಳಿಸಲಿಲ್ಲ. ಈ ಎರಡು ಮಾತುಗಳಲ್ಲಿರುವ ವ್ಯತ್ಯಾಸವನ್ನು ಗಮನಿಸಿರಿ. ಅಲ್ಲಿ ಅಲೆದಾಡಿದನೇ ಹೊರತು ಸುಖವಾದ ಜೀವನ ಅವನು ಅನುಭವಿಸಲಿಲ್ಲ. ರೂತ. 1:4 ರಲ್ಲಿ ಹತ್ತು ವರ್ಷಗಳು ಅಲ್ಲಿ ಜೀವಿಸಿದ್ದರೆಂದು ತಿಳಿಸಲಾಗಿದೆ. ಹತ್ತು ವರ್ಷಗಳಲ್ಲಿ ಅವರು ಸಂತೋಷ ಸಮಾಧಾನ ಆರೋಗ್ಯ ಎಲ್ಲವನ್ನೂ ಕಳೆದುಕೊಂಡು ಕಡೆಗೆ ಮರಣ ಹೊಂದಿದರು. ಆ ಹತ್ತು ವರ್ಷಗಳಲ್ಲಿ ಅವರು ಕರ್ತನಿಗಾಗಿ ಯಾವ ಸೇವೆಯನ್ನೂ ಮಾಡಲೇ ಇಲ್ಲ.

ಈ ಹತ್ತು ವರ್ಷಗಳು ಇದನ್ನು ಯೋಚಿಸಿರಿ. ಒಂದು ವೇಳೆ ಎಲಿಮೆಲೆಕನು ಕೆಲವು ದಿನಗಳು ಮಾತ್ರ ಅಲ್ಲಿ ಸಂಚರಿಸಿ ತಿರುಗಿ ಬೆತ್ಲೆಹೇಮಿಗೆ ಹೋಗಿಬಿಡಬಹುದೆಂದು ನೆನೆಸಿದ್ದಿರಬಹುದು. ಹೀಗೆಯೇ ಹತ್ತು ವರ್ಷಗಳು ಅವಮಾನ, ಬಡತನ ಕಷ್ಟಗಳನ್ನು ಅವನು ಅನುಭವಿಸಿದನು. ಒಂದು ತಮಾಷೆಯಾದ ಕಥೆ ಹೀಗಿದೆ. ದೇಶವನ್ನು ಬಿಟ್ಟು ದೇಶ ತಿರುಗಾಡುವ ಬಾತುಗಳಲ್ಲಿ ಕೆಲವು ಬಾತುಗಳು ಮೇಲೆ ಹಾರಾಡುತ್ತಾ ಹೊಲದಲ್ಲಿ ಬೆಳೆದಿರುವ ಧಾನ್ಯಗಳನ್ನು ನೋಡಿತು. ಹಾಗೆಯೇ ಸ್ವಲ್ಪ ಧಾನ್ಯಗಳನ್ನು ತಿಂದು ನಂತರ

ಎಲ್ಲಾ ದ್ರೋಹಗಳಿಂದ ನನ್ನನ್ನು ಬಿಡುಗಡೆ ಮಾಡು; ಮೂರ್ಖರ ನಿಂದೆಗೆ ಗುರಿಮಾಡಬೇಡ (ಕೀರ್ತ. 39:8).

ಹಾರೋಣವೆಂದು ಯೋಚಿಸಿ ಹೊಲದಲ್ಲಿದ್ದ ಧಾನ್ಯಗಳನ್ನು ತಿಂದವು. ಧಾನ್ಯಗಳನ್ನು ಸಂತೋಷದಿಂದ ತಿಂದವು ಸರಿ. ನಾಳೆಯೂ ಕೂಡ ಇನ್ನೂ ಸ್ವಲ್ಪ ತಿಂದುಬಿಟ್ಟು ನಂತರ ಹಾರೋಣವೆಂದು ಯೋಚಿಸಿದವು. ನಾಳೆ ಮತ್ತೊಂದು ದಿನ ಹೀಗೆಯೇ ದಿನಗಳು ಕಳೆದವು. ವಾರಗಳು ತಿಂಗಳುಗಳಾದವು. ಬಹಳ ದಿನಗಳು ಸಮೃದ್ಧಿಯಾಗಿ ಧಾನ್ಯಗಳನ್ನು ತಿಂದುದರಿಂದಲೂ ಅವು ತುಂಬಾ ಕೊಬ್ಬಿ ದಪ್ಪಗಾಗಿ ಬಿಟ್ಟವು. ಅವುಗಳಿಂದ ಹಾರಲು ಆಗಲಿಲ್ಲ. ಆ ಹೊಲದ ಯಜಮಾನ ದಿಢೀರೆಂದು ಒಂದು ದಿನ ಬಂದು ಆ ಬಾತುಗಳನ್ನು ನೋಡುತ್ತಾನೆ. ಅವನಿಗೆ ಸಂತೋಷವಾಯಿತು. ಅವು ದಪ್ಪಗಾಗಿದ್ದುದರಿಂದ ಹಾರಲಾಗದೆ ಸುಲಭವಾಗಿ ಅವನ ಕೈಗೆ ಸಿಕ್ಕಿ ಬಿದ್ದವು. ಮನೆಗೆ ತೆಗೆದುಕೊಂಡು ಹೋಗಿ ಕೊಯ್ದು ಅವುಗಳನ್ನು ತಿಂದುಬಿಟ್ಟನು. ಹೀಗೆಯೇ ಲೋಕದ ಉಲ್ಲಾಸಗಳಲ್ಲಿ ಸಂತೋಷಿಸುವವರು ಹೇಗೆ ತಾನೇ ಯೇಸುಕ್ರಿಸ್ತನ ಬರೋಣದಲ್ಲಿ ಆತನನ್ನು ಎದುರುಗೊಳ್ಳುವರು? ಅಂತ್ಯಕ್ರಿಸ್ತನ ಆಳ್ವಿಕೆಯಲ್ಲಿ ಸಿಕ್ಕಿ ಹಾಕಿಕೊಳ್ಳುವರು. ಸೈತಾನನು ಹೀಗೆಯೇ ಮೋವಾಬಿನ ಆಕರ್ಷಣೆಗಳನ್ನು ತೋರಿಸುವನು. ಸ್ವಲ್ಪ ಪಾಪ ಮಾಡಿದರೆ ಏನಾಗುತ್ತದೆ? ಈ ದಿನ ಪಾಪ ಮಾಡಿ ನಾಳೆ ಕರ್ತನ ಕಡೆಗೆ ತಿರುಗಿಕೊಳ್ಳೋಣ. ಸ್ವಲ್ಪ ಲೋಕದ ಆಸೆ ಸಂತೋಷಗಳನ್ನು ಅನುಭವಿಸಿದರೆ ಏನಾಗಿ ಹೋಗುತ್ತದೆ? ಸ್ವಲ್ಪ ಸ್ವಲ್ಪವಾಗಿ ಮನಸ್ಸು ಪಾಪದ ಕಡೆಗೆ ಎಳೆಯುತ್ತದೆ. ಜೇಡರ ಹುಳವು ತನ್ನಲ್ಲಿ ಸಿಕ್ಕಿಕೊಂಡ ಹುಳುವಿನ ಮೇಲೆ ಬಲೆಯನ್ನು ಹೆಣೆದು ತನ್ನಲ್ಲಿ ಸಿಕ್ಕಿಸಿಕೊಳ್ಳುವಂತೆ ಸೈತಾನನು ಪಾಪದ ಸಂತೋಷಗಳನ್ನು ಅನುಭವಿಸುವಂತೆ ಮಾಡಿ ಬಂಧನದಲ್ಲಿ ಸಿಕ್ಕಿಸಿಕೊಳ್ಳುತ್ತಾನೆ. ಮೋವಾಬಿಗೆ ಹೋದ ಎಲಿಮೆಲೆಕನ ಕುಟುಂಬವು ಹತ್ತು ವರ್ಷಗಳನ್ನು ಅಲ್ಲಿಯೇ ಕಳೆದರು. ಎಷ್ಟು ವೇದನೆಯಾದ ಕಾರ್ಯ. ಅಲ್ಲಿಯೇ ಎಲಿಮೆಲೆಕನು ಸತ್ತನು. ಅವನ ಇಬ್ಬರು ಮಕ್ಕಳೂ ಮಹ್ಲೋನ್ ಕಿಲ್ಯೋನ್ ಸತ್ತರು. ವಿಧವೆಯಾದ ನೊವೋಮಿಯು ತನ್ನ ಇಬ್ಬರು ವಿಧವೆಯರಾದ ಸೊಸೆಯರೊಂದಿಗೆ ದು:ಖವನ್ನು ಅನುಭವಿಸಬೇಕಾಯಿತು. ತನ್ನ ಇಬ್ಬರು ಮಕ್ಕಳಿಗೆ ಮೋವಾಬ್ಯ ಸ್ತ್ರೀಯರನ್ನು ಮದುವೆ ಮಾಡುವಾಗ ಇಂಥ ಸ್ಥಿತಿ ಬರಬಹುದೆಂದು ನೊವೋಮಿಯು ಯೋಚಿಸಿರಲೇ ಇಲ್ಲವೆಂದು ಕಾಣುತ್ತದೆ. ವಿಶ್ವಾಸಿಗೂ ಅವಿಶ್ವಾಸಿಗೂ ಜೊತೆ ಏನು ಎಂಬ ದೇವರ ವಾಕ್ಯವನ್ನು ಕುರಿತು ಅವಳು ಯೋಚಿಸಿಯೇ ಇರಲಿಲ್ಲವೆಂದು ಕಾಣುತ್ತದೆ. ಆದರೆ ಎಲ್ಲವೂ ಕನಸಿನಲ್ಲಿ ನಡೆದಂತೆ ನಡೆದು ಹೋಯಿತು. ಒಂದು ದಿನ ನೊವೋಮಿಗೆ ಒಂದು ಸಮಾಚಾರ ಸಿಕ್ಕಿತು. ಅದು ಉಜ್ಜೀವನದ ಸುದ್ದಿ ಒಂದು ಸುವಾರ್ತೆ! ಉಜ್ಜೀವನ ಎಂದರೇನು? ಉಜ್ಜೀವನ ಎಂದರೆ ಕರ್ತನ ಕಡೆಗೆ ತಿರುಗಿಕೊಳ್ಳುವುದೇ. ಹೊಸ ಹೊಸ ಆತ್ಮಗಳು ಕರ್ತನ ಕಡೆಗೆ ತಿರುಗಿಕೊಳ್ಳುವುದೇ ಒಂದು ಉಜ್ಜೀವನ. ಹಿಂಜಾರಿ ಹೋದವರು ಮೊದಲಿದ್ದ ಪ್ರೀತಿಗೆ ತಿರುಗಿಕೊಳ್ಳುವುದೇ ಉಜ್ಜೀವನ. ನೊವೋಮಿಯು ಕೇಳಿದ ಈ ಉಜ್ಜೀವನ.

ನೊವೋಮಿಯು ಕೇಳಿದ ಈ ಉಜ್ಜೀವನದ ಸುದ್ದಿ ಏನು? ದೇವರು ತನ್ನ ಜನರನ್ನು ಸಂಧಿಸುತ್ತಾನೆಂಬುದೇ. ತನ್ನ ಜನರಿಗೆ ಊಟವನ್ನು ಕೊಡುತ್ತಾನೆಂಬ ಸುದ್ದಿ. ನೊವೋಮಿಯು ಹಿಂದಿನ ಪ್ರೀತಿಗೆ ತಿರುಗಿದಳು. ಅನ್ಯ ಜಾತಿಯವಳಾದ ರೂತಳು ಇಸ್ರಾಯೇಲ್ ದೇವರ ಬಳಿಗೆ ಬಂದಳು. ಹಾ, ಎಷ್ಟು ದೊಡ್ಡ ಉಜ್ಜೀವನ! ಹೊಸ ಆತ್ಮಗಳು ಕರ್ತನ ಬಳಿ ಬರುವುದು, ಹಿಂಜಾರಿ ಹೋಗಿರುವವರು ಹಿಂದಿನ ಪ್ರೀತಿಗೆ ತಿರುಗುವುದು ಎಷ್ಟು ದೊಡ್ಡ ಉಜ್ಜೀವನ! ಇದು ಉಜ್ಜೀವನದ ಕಾಲ. ಕರ್ತನು ತನ್ನ ಜನರನ್ನು ಸಂಧಿಸುವ ದಿನಗಳು, ಆತ್ಮೀಕ ಆಹಾರವನ್ನು ತುಂಬಿ ತುಳುಕುವಷ್ಟು ಕೊಡುವ ದಿನಗಳು. ಈ 20ನೇ ಶತಮಾನದಲ್ಲಿ ಉಜ್ಜೀವನವನ್ನು ಕಾಣಲಿದ್ದೇವೆ. 1930ರಲ್ಲಿ ವೇಲ್ಸ್ ದೇಶದಲ್ಲಿ ಕರ್ತನು ತನ್ನ ಜನರನ್ನು ಸಂಧಿಸಿದನು. ವೇಲ್ಸ್ ದೇಶದಲ್ಲಿ ಉಜ್ಜೀವನ ಆರಂಭವಾಯಿತು. 1958ರಲ್ಲಿ ಕೊರಿಯಾ ದೇಶದ ಮಕ್ಕಳು ಕರ್ತನಿಂದ ಸಂಧಿಸಲ್ಪಟ್ಟರು. ದೊಡ್ಡ ಉಜ್ಜೀವನ ಉದಯವಾಯಿತು. 1965ರಲ್ಲಿ ಇಂಡೋನೇಷಿಯಾ ದೇಶದ ಜನರಲ್ಲಿ ಉಜ್ಜೀವನದ ಹೊಳೆಯನ್ನು ಹರಿಸಲು ಕರ್ತನು ಮನಸ್ಸು ಮಾಡಿದನು. ಅಲ್ಲಿ ಉಜ್ಜೀವನದ ಅಗ್ನಿ ಹತ್ತಿ ಉರಿಯಿತು. ಈ ದಿನಗಳಲ್ಲಿ ಕರ್ತನು ನಮ್ಮ ದೇಶದಲ್ಲಿ ಉಜ್ಜೀವನವನ್ನು ಕಳುಹಿಸುತ್ತಿದ್ದಾನೆ. ಬೆತ್ಲೆಹೇಮಿಗೆ ಹಿಂತಿರುಗಿ ಹೋಗೋಣ, ಆದಿ ಅಪೋಸ್ತಲರ ಕಾಲಕ್ಕೆ ಹಿಂತಿರುಗೋಣ, ಸತ್ಯವೇದದ ಕಾಲಕ್ಕೆ ಹಿಂತಿರುಗೋಣ. ಕರ್ತನ ಬರೋಣಕ್ಕೆ ಮುಂಚೆ ಎಲೀಯನ ಆತ್ಮದೊಂದಿಗೂ ಬಲದೊಂದಿಗೂ ಕರ್ತನ ಸೇವೆಯನ್ನು ಮಾಡೋಣ!.

ರೂತಳ ತೀರ್ಮಾನ ! ನಿನ್ನನ್ನು ಬಿಟ್ಟು ಹಿಂದಿರುಗಬೇಕೆಂದು ನನ್ನನ್ನು ಒತ್ತಾಯಪಡಿಸಬೇಡ. ನೀನು ಎಲ್ಲಿಗೆ ಹೋದರೂ ನಾನು ಅಲ್ಲಿಗೆ ಬರುವೆನು; ನೀನು ವಾಸಿಸುವಲ್ಲೇ ನಾನೂ ವಾಸಿಸುವೆನು. ನಿನ್ನ ಜನರೇ ನನ್ನ ಜನರು; ನಿನ್ನ ದೇವರೇ

ಯೆಹೋವನೇ, ನನ್ನ ಪ್ರಾರ್ಥನೆಯನ್ನು ಲಾಲಿಸು; ನನ್ನ ಮೊರೆಗೆ ಕಿವಿಗೊಡು (ಕೀರ್ತ. 139:12).

ನನ್ನ ದೇವರು (ರೂತ. 1:16).

ಸತ್ಯವೇದದ ಈ ಮಾತುಗಳನ್ನು ಓದುವಾಗಲೆಲ್ಲಾ ರೂತಳ ತೀರ್ಮಾನವು ನಮ್ಮ ಹೃದಯವನ್ನು ಪರವಶಗೊಳಿಸುತ್ತದೆ. ಸತ್ಯವೇದದಲ್ಲಿ ಬಹಳ ಚೆಂದವಾದ ವಾಕ್ಯವಿದು. ಎಷ್ಟು ಉನ್ನತವಾದ ತೀರ್ಮಾನವನ್ನು ಅಂದು ರೂತಳು ಮಾಡುತ್ತಾಳೆ! ಈ ಮಾತುಗಳು ಯಾವಾಗಲೂ ನಮ್ಮ ಹೃದಯದಲ್ಲಿ ಧ್ವನಿಸುತ್ತಲೇ ಇರಲಿ. ಅಂದು ಅವಳು ನೊವೋಮಿಯನ್ನು ಆರಿಸಿಕೊಂಡಳು; ನೊವೋಮಿಯೊಂದಿಗೆ ದೇವಜನರನ್ನು ಆರಿಸಿಕೊಂಡಳು. ದೇವಜನರೊಂದಿಗೆ ಇಸ್ರಾಯೇಲ್ ದೇಶವನ್ನು ಆರಿಸಿಕೊಂಡಳು. ಎಲ್ಲಕ್ಕಿಂತ ಮಿಗಿಲಾಗಿ ಜೀವಸ್ವರೂಪ ದೇವರಾದ ಕರ್ತನನ್ನು ತನಗೆಂದು ಆರಿಸಿಕೊಂಡಳು. ನೊವೋಮಿಯು ಬೆತ್ಲೆಹೇಮಿಗೆ ಹೋಗೋಣವೆಂದು ತನ್ನ ಇಬ್ಬರು ಸೊಸೆಯಂದಿರನ್ನು ಕರೆಯುತ್ತಾಳೆ. ಇಬ್ಬರೂ ಯೌವನಸ್ಥ ವಿಧವೆಯರು ನೊವೋಮಿಯು ಮೋವಾಬ್ ದೇಶವನ್ನು ಬಿಟ್ಟು ಇಸ್ರಾಯೇಲ್ ದೇಶಕ್ಕೆ ಹೊರಡುವ ಮೊದಲು ಅವಳ ಸೊಸೆಯರೊಂದಿಗೆ ಮನಸ್ಸು ಬಿಚ್ಚಿ ಮಾತನಾಡುತ್ತಾಳೆ. ಅವರನ್ನು ನೋಡಿ ನನ್ನ ಮಕ್ಕಳೇ, ನೀವು ಹಿಂತಿರುಗಿ ನಿಮ್ಮ ಸ್ವಜನರ ಬಳಿಗೆ ಹೋಗಿರಿ. ನನ್ನೊಡನೆ ಏಕೆ ಬರುತ್ತೀರಿ? ನಿಮಗಾಗಿ ನಾನು ಮಕ್ಕಳನ್ನು ಹೆರುವುದಾದೀತೇ? ಎಂದು ಅವರನ್ನು ಕೇಳಿಕೊಂಡಾಗ ಇಬ್ಬರು ಸೊಸೆಯಂದಿರೂ ಜೋರಾಗಿ ಅಳುತ್ತಾರೆ. ಒರ್ಫಳು ತನ್ನ ಅತ್ತೆಗೆ ಮುದ್ದಿಟ್ಟು ಹೊರಟು ಹೋಗುತ್ತಾಳೆ. ಆದರೆ ರೂತಳಾದರೋ ಅವಳನ್ನು ಬಿಡದೆ ಹಿಂಬಾಲಿಸಿದಳು. ಒರ್ಫಳೂ ರೂತಳೂ ಇಂದಿನ ಕ್ರೈಸ್ತರಿಗೆ ನೆರಳಿನಂತಿದ್ದಾರೆ. ಒರ್ಫಳಂಥ ಕ್ರೈಸ್ತರು ಲೋಕದ ಆಕರ್ಷಣೆಗೆ ಒಳಗಾಗಿ ಹಿಂತಿರುಗಿ ಹೋಗಿ ಬಿಡುತ್ತಾರೆ. ಆದರೆ ರೂತಳಂತಹ ಕ್ರೈಸ್ತರು ಎಡೆಬಿಡದೆ ಕ್ರಿಸ್ತನನ್ನು ಹಿಂಬಾಲಿಸುತ್ತಾರೆ. ಮೋಶೆ ದೊಡ್ಡವನಾದಾಗ ಅವನ ಮುಂದೆ ಎರಡು ಕಾರ್ಯಗಳು ಇಡಲ್ಪಟ್ಟವು. ಒಂದು ಐಗುಪ್ತ್ಯದ ಐಶ್ವರ್ಯ. ಇನ್ನೊಂದು ದೇವಜನರೊಂದಿಗೆ ಶ್ರಮೆ. ಒಂದು ಫರೋಹನ ಅರಸನ ಮಗಳ ಮಗನಾಗಿರುವ ಅಂತಸ್ತು. ಇನ್ನೊಂದು ಕ್ರಿಸ್ತನ ನಿಮಿತ್ತದ ನಿಂದೆಗಳು ಆದರೆ ಅವನಾದರೋ ಕ್ರಿಸ್ತನ ಜನರೊಂದಿಗೆ ಶ್ರಮೆಯನ್ನು ಅನುಭವಿಸಲು ತೀರ್ಮಾನಿಸಿದನು. ದೇವಮಗುವೇ, ಲೋಕವೂ ಕ್ರಿಸ್ತನೂ, ನಿನ್ನ ಮುಂದೆ ಇದ್ದಾರೆ. ಪಾಪದ ಜೀವಿತದಿಂದ ಸಿಗುವ ಉಲ್ಲಾಸಗಳೂ ಇವೆ. ಪರಿಶುದ್ಧ ಮಾರ್ಗವೂ ಇದೆ. ಇವೆರೆಡರಲ್ಲಿ ನೀನು ಯಾವುದನ್ನು ಆರಿಸಿಕೊಳ್ಳುವಿ? ಒರ್ಫಳು ಯೋಚಿಸಲು ಆರಂಭಿಸಿದಳು. ನೊವೋಮಿಯನ್ನು ಹಿಂಬಾಲಿಸಿದರೆ ಈ ಲೋಕದ ಯಾವ ವಿಧವಾದ ಸಂತೋಷಗಳು ನಮಗೆ ಸಿಗುವುದಿಲ್ಲ. ಆದರೆ ಮೋವಾಬಿನಲ್ಲಿ ಮನಸ್ಸು ಬಂದಂತೆ ಜೀವಿಸಬಹುದು. ಆದುದರಿಂದ ಅವಳು ನಾಟಕೀಯವಾಗಿ ಅತ್ತು ಹಿಂದಕ್ಕೆ ಹೊರಟು ಹೋದಳು. ಈಗಲೂ ಅನೇಕ ಕ್ರೈಸ್ತರು ಲೋಕದ ಆಕರ್ಷಣೆಗೆ ಒಳಗಾಗಿ ಜೀವಿಸುತ್ತಿರುವರು. ಉದ್ಯೋಗಕ್ಕಾಗಿ, ವಿದ್ಯಾಭ್ಯಾಸಕ್ಕಾಗಿ, ಸ್ಕಾಲರ್‌ಶಿಪ್‌ಗಾಗಿ ಕ್ರೈಸ್ತ ಮತವನ್ನು ಬಿಟ್ಟು ಬಿಡುತ್ತಾರೆ. ಈ ಕಷ್ಟ ದು:ಖ ಹಿಂಸೆಗಳು ಸಾಕೆಂದು ಸತ್ಯವೇದವನ್ನು ಬಿಸಾಡಿ ಹೊರಟು ಹೋಗುತ್ತಾರೆ! ಅಯ್ಯೋ, ಒರ್ಫಳೇ ನೀನು ಎಲ್ಲಿದ್ದೀ? ಅರ್ಧ ದಾರಿಯವರೆಗೂ ಬಂದು ಹಿಂದಿರುಗಿ ಬಿಟ್ಟೆಯಲ್ಲಾ ನಿನ್ನ ಸ್ಥಿತಿ ಏನು?

ದೇವಮಗುವೇ, ನೀನು ಒರ್ಫಳೋ, ರೂತಳೋ? ಸ್ವಲ್ಪ ಯೋಚಿಸಿ ನೋಡು. ಕ್ರಿಸ್ತನೊಂದಿಗೆ ಶ್ರಮೆಯನ್ನು ಅನುಭವಿಸಲು ಸಿದ್ಧವಾಗಿರುವೆಯಾ? ನಿನ್ನ ವಿಮೋಚಕನು ನಡೆದ ದಾರಿಯಲ್ಲಿ ನಡೆಯುವೆಯಾ? ಲೋಕವು ಹಿಂದೆ ಶಿಲುಬೆಯು ಮುಂದೆ, ನಾನು ಹಿಂದೆ ನೋಡೆನು ಎಂದು ಹಾಡುವಿಯಾ? ನಿನ್ನನ್ನೇ ಹಿಂಬಾಲಿಸುತ್ತೇನೆ ಸ್ವಾಮೀ, ನನಗಾಗಿ ನೀನು ಸತ್ತಿಯಲ್ಲಾ, ಎಲ್ಲರೂ ಓಡಿ ಹೋದರೂ ನಾನು ನಿನ್ನ ಬಳಿಯಲ್ಲಿ ನಿಲ್ಲುವೆನು ಎಂದು ಶುದ್ಧ ಹೃದಯದಿಂದ ಕರ್ತನಿಗಾಗಿ ನಿಲ್ಲುವೆಯಾ? ಎಷ್ಟೇ ಬಲಶಾಲಿಗಳು ಹಿಂಜಾರಿ ಹೋದರೂ ನೀನು ಕರ್ತನನ್ನೇ ದೃಷ್ಟಿಸಿ ನೋಡುತ್ತಾ ಅವನನ್ನೇ ಹಿಂಬಾಲಿಸುವಿಯಾ? ಇಡೀ ಲೋಕವು ನಿನ್ನನ್ನು ನೋಡಿ ಯಜ್ಞದ ಕುರಿಯಾದಾತನು ಎಲ್ಲಿ ಹೋದರೂ ಇವರು ಆತನನ್ನು ಹಿಂಬಾಲಿಸುವರು ಎಂದು ಸಾಕ್ಷಿ ಹೇಳುವರೇ? (ಪ್ರಕ. 14:4) ಹಳೆಯ ಒಡಂಬಡಿಕೆಯಲ್ಲಿ ಎಲೀಷನನ್ನು ಎಲೀಯನು ಎಷ್ಟು ಮಟ್ಟಿಗೆ ಎಡಬಿಡದೆ ಹಿಂಬಾಲಿಸಿದನು.

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ನಮ್ಮ ಹಿತಕ್ಕಾಗಿ ನೀನು ಮಾಡಿದ ಆಲೋಚನೆಗಳೂ ಅದ್ಭುತಕಾರ್ಯಗಳೂ
ಎಷ್ಟೋ ವಿಶೇಷವಾಗಿವೆ (ಕೀರ್ತ. 40:5).

**ವಿಶೇಷ ಸೂಚನೆ**

ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : **0091–820 2002781, 0091–9902334941, 0091–9964070654, 0091–820 2559712.**

---

## ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್
## ಆಂಗ್ಲ ಮಾಧ್ಯಮ ಶಾಲೆಗೆ ಬೇಕಾದ ಅವಶ್ಯಕತೆಗಳು :

- **ಶಿಶು ವಿಹಾರಕ್ಕೆ ಬೇಕಾಗುವ ಆಟದ ಸಾಮಗ್ರಿಗಳು**
- **ನೋಟ್ ಬುಕ್ಸ್**
- **ಡೆಸ್ಕ್ ಮತ್ತು ಕುರ್ಚಿಗಳನ್ನು ಕೊಡಲು ಇಚ್ಛಿಸುವ ದಾನಿಗಳು**

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ


**0091 820 2002781, 0091 9902334941**

---




# ನಮ್ಮೊಂದಿಗೆ ಆಚರಿಸಿ





ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 0091 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.




1) ಸಾರಳ ಜೀವಮಾನ ಕಾಲ ಎಷ್ಟು ? (ಆದಿ. 23:1).
2) ಸಂಸೋನನ ತಂದೆಯ ಹೆಸರೇನು ? (ನ್ಯಾಯ. 13:1).
3) ತಬಿಥಾ ಎಂಬ ಹೆಸರಿಗೆ ಗ್ರೀಕ್ ಭಾಷೆಯಲ್ಲಿ ಏನೆಂದು ಕರೆಯುತ್ತಾರೆ? (ಅ.ಕೃ. 9:36).
4) ಯೋಸೇಫನ ತಂದೆಯ ಹೆಸರೇನು ? (ಆದಿ. 47:7).
5) ಬಾಲಕನಾದ ಸಮುವೇಲನು ಯಾರ ಕೈ ಕೆಳಗಿದ್ದುಕೊಂಡು ಯೆಹೋವನ ಸೇವೆ ಮಾಡುತ್ತಿದ್ದನು? (1 ಸಮು. 3:1).
6) ಸೌಲನು ಅರಸನಾಗಿದ್ದಾಗ ಎಷ್ಟು ವರ್ಷದವನಾಗಿದ್ದನು ? (1 ಸಮು. 13:1).
7) ಹೆರೋದನು ಹೇಗೆ ಸತ್ತನು (ಅ.ಕೃ. 12:21).
8) ಯಾರು ಲೋಕಕ್ಕೆಲ್ಲಾ ದೊಡ್ಡ ಕ್ಷಾಮ ಬರುವದು ಎಂದು ಸೂಚಿಸಿದನು ? (ಅ.ಕೃ. 11:28).
9) ಎಷ್ಟನೇ ವರ್ಷದಲ್ಲಿ ಅರಸನಾದ ಸೊಲೊಮೋನನು ಯೆಹೋವನ ಆಲಯವನ್ನು ಕಟ್ಟುವುದಕ್ಕೆ ಪ್ರಾರಂಭಿಸಿದನು ? (1 ಅರಸು. 6:1).
10) ಪ್ರವಾದಿಗೆ ಎಲ್ಲಿ ಮರ್ಯಾದೆ ಇಲ್ಲ ? (ಮತ್ತಾ. 13:57).

**ಏಪ್ರಿಲ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು**

1) ಆರೋನ
2) ರೆಬೆಕ್ಕ, ರೇಚಲ್, ರೂತ
3) ಎಸ್ತೇರಳು
4) ಸಿರಿಯನ್ ರಾಜ
5) ಅಕ್ವಿಲ್ಲ
6) ಡಯಾನ
7) ಗುಡಾರ ನೇಯುತ್ತಿದ್ದನು
8) ಜೊತೆ ಕೆಲಸದವನೂ, ಸಹಭಟನೂ, ಸಹೋದರನು.
9) ಮಿಲೇತ
10) ದ್ಯೌಸ್ ದೇವರು.

# ಪ್ರಾರ್ಥನಾ ಸ್ವರ

**ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.**

**ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.**

**ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)**

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2559886**

ಯಾವನು ಅಹಂಕಾರಿಗಳಲ್ಲಿಯೂ ಸುಳ್ಳನ್ನು ಹಿಂಬಾಲಿಸುವವರಲ್ಲಿಯೂ ಸೇರದೆ
ಯೆಹೋವನನ್ನೇ ನಂಬುತ್ತಾನೋ ಅವನೇ ಧನ್ಯನು (ಕೀರ್ತ. 40:4).